RNI: KNKAN/ 25/A5387 | ಸಂಪಾದಕರು: ರಾಜೇಶ್ವರಿ ಎಸ್. ಓಲೇಕಾರ | ಸಿಇಒ: ಚಂದ್ರಶೇಖರ ಎಸ್.ಕೆ. | ಸಹ ಸಂಪಾದಕರು: ಶಿವಕುಮಾರ

# ಸಮಾಲೋಚನೆ ಸುದ್ದಿ

ಕನ್ನಡ ದಿನ ಪತ್ರಿಕೆ

ನೇರ ನಿಖರ ನಿರ್ದಿಷ್ಟ

ಮೊ.ನಂ: 8095203132 PMG/KA/NK/HVR-59/2026-28 SAMALOCHANE RANEBENNURSUDDI Kannada Daily Morning

ಪೌರಕಾರ್ಮಿಕರಿಗೆ ಪ್ರತಿದಿನ ಗೌರವ ಸಿಗಬೇಕು: ಪೌರಾಯುಕ್ತ ಇಂಗಳಗಿ 2

ಕೆರೆಗಳನ್ನು ತುಂಬಿಸಿ ರೈತರ ಸಂಕಷ್ಟ ನಿವಾರಣೆಗೆ ಕ್ರಮ ಕೈಗೊಳ್ಳಲಿ 3

ಪುರಾಣ-ಪುಣ್ಯಕಥೆಗಳು ಸುಳ್ಳಲ್ಲ; ಅವು ಮಾನವನ ಒಳಿತಿಗೆ ಬಿತ್ತಿದ ಸತ್ಯದ ಬೀಜಗಳು 4

ಸಂಪುಟ (Volume): 1 ಸಂಚಿಕೆ (Issue): 183 ಪುಟ (Page): 4 ದರ Rs. 2 ಗುರುವಾರ 24 ಸೆಪ್ಟೆಂಬರ್ 2026 ● 24 SEPTEMBER 2026 ಹಾವೇರಿ ಧಾರವಾಡ ಗದಗ ಕೊಪ್ಪಳ ವಿಜಯನಗರ ಬೆಳಗಾವಿ ಉತ್ತರ ಕನ್ನಡ samalochanersuddi@gmail.com

## ಕೈ ಶಾಸಕರ ನಡುವೆ ಮಾತಿನ ಚಕಮಕಿ

**ಬೆಂಗಳೂರು:** ವಿಧಾನ ಸಭೆಯಲ್ಲಿ ಕಾಂಗ್ರೆಸ್ ಶಾಸಕರ ನಡುವೆ ಮಾತಿನ ಚಕಮಕಿ ನಡೆದಿದೆ. ಶಾಸಕ ಯಶವಂತರಾಯಗೌಡ ಪಾಟೀಲ್ ರಾಜೀನಾಮೆ ಕುರಿತಾಗಿ ಆಡಳಿತ ಮತ್ತು ವಿಪಕ್ಷಗಳ ನಡುವೆ ಚರ್ಚೆ, ಗದ್ದಲದ ನಡುವೆಯೇ ಕೋಲಾರ ಜಿಲ್ಲೆಯ ಕಾಂಗ್ರೆಸ್ ಶಾಸಕರ ನಡುವೆ ಜಟಾಪಟಿ ನಡೆದಿದೆ. ಬಂಗಾರಪೇಟೆ ಶಾಸಕ ಎಸ್.ಎನ್. ನಾರಾಯಣಸ್ವಾಮಿ ಮತ್ತು ಕೆಜಿಎಫ್ ಶಾಸಕಿ ರೂಪಾ ಶಶಿಧರ್ ಮಧ್ಯೆ ಸದನದಲ್ಲಿ ಮಾತಿನ ಚಕಮಕಿ ನಡೆಯಿತು.

ಬಂಗಾರಪೇಟೆ ಶಾಸಕ ನಾರಾಯಣಸ್ವಾಮಿ ಮತ್ತು ಬಾಗೇಪಲ್ಲಿ ಶಾಸಕರಾದ ಸುಬ್ಬಾರೆಡ್ಡಿ ಕುಳಿತಿದ್ದ ಆಸನದ ಬಳಿ ಹೋಗಿ ಶಾಸಕಿ ರೂಪಾ ಶಶಿಧರ್ ಆಕ್ರೋಶ ಹೊರ ಹಾಕಿದ ಪ್ರಸಂಗ ನಡೆಯಿತು. ಏರುಧ್ವನಿಯಲ್ಲೇ ಶಾಸಕ ನಾರಾಯಣಸ್ವಾಮಿ ಜೊತೆ ಸದನದಲ್ಲಿ ಶಾಸಕಿ ರೂಪಾ ಅವರು ಮಾತನಾಡಿದರು. ನಾರಾಯಣಸ್ವಾಮಿ ಆಸನದ ಬಳಿ ಬಂದು ಏರು ಧ್ವನಿಯಲ್ಲೇ ಮಾತಾನಾಡಿದ ರೂಪಾ ಶಶಿಧರ್ ತಮ್ಮ ಅಸಮಾಧಾನ ಹೊರಹಾಕಿದರು.

ಸದನದಲ್ಲಿ ಬುಧವಾರ ಬಂಗಾರಪೇಟೆ ಶಾಸಕ ನಾರಾಯಣಸ್ವಾಮಿ, ಸುಬ್ಬಾರೆಡ್ಡಿ ಅಕ್ಕಪಕ್ಕ ಕುಳಿತು ಮಾತನಾಡುತ್ತಿದ್ದರು. ಇಬ್ಬರು ಶಾಸಕರು ನಗುನಗುತ್ತಾ ಮಾತನಾಡುವಾಗ ಹಿಂದೆಯಿಂದ ಎದ್ದುಬಂದ ರೂಪಕಲಾ ಕಿಡಿಕಾರಿದ ಘಟನೆ ನಡೆಯಿತು.

**ಸದನದಲ್ಲೇ ಕೂಗಾಟ:** ಇಬ್ಬರು ಶಾಸಕರ ವಿರುದ್ಧ ಏರು ಧ್ವನಿಯಲ್ಲಿ ಆಕ್ರೋಶ ಹೊರಹಾಕಿದ ರೂಪಾ ಶಶಿಧರ್, "ನನ್ನನ್ನ ಅಪಮಾನ ಮಾಡ್ತಾ ಇದ್ದೀರಿ. ನೀವು ಎಲ್ಲ ಒಂದಾಗಿದ್ದೀರಿ. ಏನು ಮಾಡೋದಕ್ಕೆ ಆಗುತ್ತೆ ಎಂದು ಕೂಗಾಡಿದರು. ಅಲ್ಲದೆ, ಟೇಬಲ್ ಬಡಿದು ಆಕ್ರೋಶ ಹೊರಹಾಕಿದರು.



### ಅಸಮಾಧಾನಕ್ಕೆ ಕಾರಣ ಏನು?

**ಸದನದಲ್ಲಿ ಶಾಸಕಿ ರೂಪಾ ಶಶಿಧರ್ ದಿಢೀರ್ ಕೋಪಕ್ಕೆ ಏನು ಕಾರಣ ಎಂಬ ಬಗ್ಗೆಯೂ ಚರ್ಚೆ ನಡೆಯುತ್ತಿದೆ. ನನ್ನ ಬಗ್ಗೆಯೇ ನಗ್ತಾ ನಗ್ತಾ ಮಾತನಾಡ್ತಿದ್ದಾರೆ ಹಾಗೂ ಅಪಹಾಸ್ಯ ಮಾಡ್ತಿದ್ದಾರೆ ಎಂಬುದು ರೂಪಕಲಾ ಆಕ್ರೋಶಕ್ಕೆ ಕಾರಣ ಎನ್ನಲಾಗಿದೆ. ಆದರೆ ಈ ಬಗ್ಗೆ ಶಾಸಕರು ಯಾವುದೇ ಪ್ರತಿಕ್ರಿಯೆಯನ್ನು ಈವರೆಗೆ ನೀಡಿಲ್ಲ. ಒಟ್ಟಿನಲ್ಲಿ ಬರ ಹಾಗೂ ಇಂಡಿ ಶಾಸಕ ಯಶವಂತರಾಯ ಗೌಡ ಪಾಟೀಲ್ ರಾಜೀನಾಮೆಯ ಸಂದರ್ಭದಲ್ಲಿ ಗಂಭೀರ ಚರ್ಚೆಗಳು ನಡೆಯುತ್ತಿದ್ದ ವೇಳೆ ಕಾಂಗ್ರೆಸ್ ಶಾಸಕರ ಹೈಡ್ರಾಮ ಕುತೂಹಲಕ್ಕೆ ಕಾರಣವಾಗಿದೆ. ಆಡಳಿತ ಪಕ್ಷದ ವಿರುದ್ಧ ವಾಗ್ದಾಳಿ ನಡೆಸುತ್ತಿರುವ ಬಿಜೆಪಿಗೆ ಇದೊಂದು ಅಸ್ತ್ರವಾಗಿ ಸಿಕ್ಕಿದೆ.**

ಘಟನೆಯ ಹಿನ್ನಲೆಯಲ್ಲಿ ವಿರೋಧ ಪಕ್ಷದ ನಾಯಕ ಆರ್ ಅಶೋಕ್ ವ್ಯಂಗ್ಯವಾಗಿ ಕಾಂಗ್ರೆಸ್ ಶಾಸಕರ ಕಾಲೆಳೆದರು. "ಇಲ್ಲೊಂದು ಗಲಾಟೆ ಆಗ್ತಿದೆ ನೋಡಿ. ಸುಮ್ನಿರಮ್ಮಾ ಹೊಡಿಬೇಡ" ಎಂದರು.

## ಕರ್ನಾಟಕ ಬಿಜೆಪಿ ಪ್ರಭಾರಿಯಾಗಿ ಹರೀಶ್ ದ್ವಿವೇದಿ ನೇಮಕ

**ದೆಹಲಿ:** ಬಿಜೆಪಿ ಸಂಘಟನಾತ್ಮಕ ಪುನಾರಚನೆಯ ಭಾಗವಾಗಿ ವಿವಿಧ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ನೂತನ ಪ್ರಭಾರಿ (ಉಸ್ತುವಾರಿ) ಹಾಗೂ ಸಹ-ಪ್ರಭಾರಿಗಳನ್ನು (ಸಹ-ಉಸ್ತುವಾರಿ) ನೇಮಕ ಮಾಡಿದೆ. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾದ ನಿತಿನ್ ನವೀನ್ ಅವರು ಈ ನೇಮಕಾತಿ ಪಟ್ಟಿಯನ್ನು ಅಧಿಕೃತವಾಗಿ ಪ್ರಕಟಿಸಿದ್ದಾರೆ.



ಕರ್ನಾಟಕ ಬಿಜೆಪಿ ಪ್ರಭಾರಿಯಾಗಿ ಹಿರಿಯ ನಾಯಕ ಹಾಗೂ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹರೀಶ್ ದ್ವಿವೇದಿ ಅವರಿಗೆ ಜವಾಬ್ದಾರಿ ವಹಿಸಲಾಗಿದೆ. ಜತೆಗೆ ಇವರಿಗೆ ಬಿಹಾರ ರಾಜ್ಯದ ಉಸ್ತುವಾರಿಯನ್ನೂ ನೀಡಲಾಗಿದೆ. ಸಹ-ಪ್ರಭಾರಿಯಾಗಿ ಡಾ. ಕಸಮ್ ವೆಂಕಟೇಶ್ವರಲು ಅವರನ್ನು ನೇಮಿಸಲಾಗಿದೆ. ದಕ್ಷಿಣ ಭಾರತದ ಪ್ರಮುಖ ರಾಜ್ಯವಾದ ಕರ್ನಾಟಕಕ್ಕೆ ಬಿಜೆಪಿ ರಾಷ್ಟ್ರೀಯ ನಾಯಕತ್ವವು ಹೊಸ ಮುಖಗಳಿಗೆ ಜವಾಬ್ದಾರಿ ಹಂಚಿಕೆ ಮಾಡಿದೆ.

ಈ ಹಿಂದೆ ಉಸ್ತುವಾರಿಯಾಗಿ ರಾಧ ಮೋಹನ್ ದಾಸ್ ಅಗರ್ವಾಲ್, ಸಹ ಉಸ್ತುವಾರಿಯಾಗಿ ಸುಧಾಕರ್ ರೆಡ್ಡಿ ಇದ್ದರು. ರಾಜ್ಯದಲ್ಲಿ ಮುಂಬರುವ ರಾಜಕೀಯ ಸವಾಲುಗಳು, ಸಂಘಟನಾ ಬಲವರ್ಧನೆ ಹಾಗೂ ಕಾರ್ಯಕರ್ತರನ್ನು ಒಗ್ಗೂಡಿಸಿ ಪಕ್ಷವನ್ನು ಮುನ್ನಡೆಸುವ ದೃಷ್ಟಿಯಿಂದ ಈ ಹೊಸ ನೇಮಕಾತಿ ಮಹತ್ವ ಪಡೆದುಕೊಂಡಿದೆ.

ಮಾಜಿ ಕೇಂದ್ರ ಸಚಿವೆ ಶ್ರೀಮತಿ ಸ್ಮೃತಿ ಇರಾನಿ ಅವರಿಗೆ ಛತ್ತೀಸ್‌ಗಢ ಮತ್ತು ಹರಿಯಾಣ ಈ ಎರಡೂ ರಾಜ್ಯಗಳ ಪ್ರಭಾರಿ ಜವಾಬ್ದಾರಿ ನೀಡಲಾಗಿದೆ. ರಾಷ್ಟ್ರ ರಾಜಧಾನಿ ದೆಹಲಿಗೆ ಡಾ. ವಿನಯ್ ಸಹಸ್ರಬುದ್ಧೆ ಪ್ರಭಾರಿಯಾಗಿ ನೇಮಕಗೊಂಡಿದ್ದು, ಮಾಜಿ ಸಂಸದ ಜಾಮ್ಯಾಂಗ್ ತ್ಸೆ-ರಿಂಗ್ ನಮ್ಗ್ಯಾಲ್ ಸಹ-ಪ್ರಭಾರಿಯಾಗಿದ್ದಾರೆ. ಗುಜರಾತ್‌ಗೆ ತರುಣ್ ಚುಗ್, ಗೋವಾಕ್ಕೆ ಡಾ. ಭಾರತಿ ಪ್ರವೀಣ್ ಪವಾರ್, ಅಸ್ಸಾಂಗೆ ಮಂಗಲ್ ಪಾಂಡೆ ಹಾಗೂ ಹಿಮಾಚಲ ಪ್ರದೇಶಕ್ಕೆ ಶ್ರೀಕಾಂತ್ ಶರ್ಮಾ ಅವರನ್ನು ಉಸ್ತುವಾರಿಗಳಾಗಿ ನೇಮಿಸಲಾಗಿದೆ.

## ದರ್ಶನ್ ಸೆಲಬ್ರಿಟಿ ಎಂಬುದು ಸಿಆರ್‌ಪಿಸಿ, ಐಪಿಸಿಗೆ ಗೊತ್ತಿಲ್ಲ

**ಬೆಂಗಳೂರು:** ರೇಣುಕಾಸ್ವಾಮಿ ಕೊಲೆ ಕೇಸ್‌ಗೆ ನಟ ದರ್ಶನ್ ತೂಗುದೀಪಗೆ ಭಾರೀ ಹಿನ್ನಡೆಯಾಗಿದೆ. ಮಾಫಿ ಸಾಕ್ಷಿಗೆ ಪ್ರದೋಷ್‌ಗೆ ಅವಕಾಶ ವಿಚಾರದಲ್ಲಿ ನಟನ ಪತ್ನಿ ವಿಜಯಲಕ್ಷ್ಮಿ ಸಲ್ಲಿಸಿದ್ದ ಅರ್ಜಿಯನ್ನು ಕರ್ನಾಟಕ ಹೈಕೋರ್ಟ್ ವಜಾಗೊಳಿಸಿದೆ. ದರ್ಶನ್ ಸೆಲಿಬ್ರಿಟಿ ಎಂದು ಅನುಮಾನವೇ ಇಲ್ಲ. ಆದರೆ, ಇದು ಸಿಆರ್‌ಪಿಸಿ ಮತ್ತು ಐಪಿಸಿಗೆ ಗೊತ್ತಿಲ್ಲ ಎಂದು ನ್ಯಾಯಾಧೀಶರು ಹೇಳಿದ್ದಾರೆ.



ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ 14ನೇ ಆರೋಪಿಯಾಗಿರುವ ಪ್ರದೋಷ್ ರಾವ್‌ನನ್ನು ಮಾಫಿ ಸಾಕ್ಷಿಯಾಗಿ ಪರಿಗಣಿಸುವುದಕ್ಕೆ ಸಂಬಂಧಿಸಿದಂತೆ ನಾನು ವಿರೋಧಿಸಿ ಮೆಮೆ ಸಲ್ಲಿಸಿದ್ದೆ. ಅದನ್ನು ವಿಚಾರಣಾಧೀನ ನ್ಯಾಯಾಲಯ ತಿರಸ್ಕಾರ ಮಾಡಿದೆ ಎಂದು ದರ್ಶನ್ ಪತ್ನಿ ವಿಜಯಲಕ್ಷ್ಮಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಸದ್ಯ ನ್ಯಾಯಮೂರ್ತಿ ವಿ ಶ್ರೀಶಾನಂದ ಅವರ ಏಕಸದಸ್ಯ ಪೀಠವು ಅರ್ಜಿಯನ್ನು ವಿಚಾರಣೆ ನಡೆಸಿ ಬಳಿಕ ವಜಾ ಮಾಡಿದೆ.

**ದರ್ಶನ್ ಪರ ವಕೀಲರ ವಾದ ಏನು?:** ದರ್ಶನ್ ಪರ ಹಿರಿಯ ವಕೀಲ ಹಷ್ಮತ್ ಪಾಷಾ ಹಾಜರಿದ್ದರು. ಮಾಫಿ ಸಾಕ್ಷಿಯಾಗುವುದಕ್ಕೂ ಮುನ್ನ ಆರೋಪಿ ಪ್ರದೋಷ್ ಜೈಲಿನಲ್ಲಿ ಖಾಸಗಿಯಾಗಿ ಮೊಬೈಲ್ ಬಳಸಿದ್ದಾನೆ. ನಿಯಮ ಮೀರಿ 4ನೇ ವ್ಯಕ್ತಿಗೆ ಕರೆ ಮಾಡಿ ಮಾನಾಡಿದ್ದಾರೆ. ಆತ ಮಾಫಿ ಸಾಕ್ಷಿಯಾಗಿರುವುದರ ಹಿಂದೆ ಷಡ್ಯಂತ್ರವಿದ್ದು, ನಟ ದರ್ಶನ್ ಅವರನ್ನು ಸಿಕ್ಕಿಹಾಕಿಸುವ ಹುನ್ನಾರ ನಡೆದಿದೆ ಎಂದು ಪೀಠದ ಗಮನಕ್ಕೆ ತಂದರು.

"ದರ್ಶನ್ ಪರ ವಕೀಲರು ಹೇಳುವ ರೀತಿಯಲ್ಲಿ ಪ್ರದೋಷ್ ಫೋನ್ ಬಳಕೆ ಮಾಡಿಲ್ಲ. ಕೈದಿಗೆ ಮನೆಯವರ ಜೊತೆ ಮಾತನಾಡಲು ಫೋನ್ ಬಳಕೆ ಮಾಡುವ ಅವಕಾಶ ಜೈಲಿನಲ್ಲಿದೆ"ಎಂದು ಪಬ್ಲಿಕ್‌ಪ್ರಾಸಿಕ್ಯೂಟರ್ ಪ್ರಸನ್ನಕುಮಾರ್ ನ್ಯಾಯಲಯದ ಗಮನಕ್ಕೆ ತಂದರು. ಪ್ರದೋಷ್ ರಾವ್ ಪರ ಹಿರಿಯ ವಕೀಲ ದಿವಾಕರ್ ಅವರು ಇದಕ್ಕೆ ದನಿಗೂಡಿಸಿದರು. " ಪ್ರದೋಷ್ ರಾವ್ ತನ್ನ ಲಾಯರ್ ಜೊತೆ ಮಾತನಾಡುವುದಾಗಿ ಹೇಳಿ, ಜೈಲು ಅಧಿಕಾರಿ ಫೋನ್ ಬಳಸಿ ಪತ್ನಿಯ ಜೊತೆ ಮಾತನಾಡಿದ್ದಾರೆ ಎಂಬುದು ಆರೋಪವಿದೆ" ಎಂದು ದಿವಾಕರ್ ಹೇಳಿದರು ಎಂದು ಬಾರ್ ಅಂಡ್ ಬೆಂಚ್ ವರದಿ ಮಾಡಿದೆ.

**ಹೈಕೋರ್ಟ್ ಹೇಳಿದ್ದೇನು?:** ಸುಪ್ರೀಂ ಕೋರ್ಟ್ 60 ಸಾಕ್ಷ್ಯಗಳನ್ನು ಒಂದು ವರ್ಷದಲ್ಲಿ ಪೂರ್ಣಗೊಳಿಸಬೇಕು ಎಂದು ನಿರ್ದೇಶನ ನೀಡಿದೆ. ಆದರೆ, ವಿಚಾರಣೆಯು ನಾನಾ ಕಾರಣಗಳಿಂದ ವಿಳಂಬವಾಗುತ್ತಿದೆ. ಕಾನೂನಿನ ಅನ್ವಯ ದರ್ಶನ್ ಪರ ವಕೀಲರು ಪ್ರದೋಷ್‌ಗೆ ಎಲ್ಲಾ ಥರದ ಪ್ರಶ್ನೆ ಕೇಳುವ ಸ್ವಾತಂತ್ರ್ಯ ಹೊಂದಿದ್ದಾರೆ. ಆರೋಪಿ ದರ್ಶನ್ ಸೆಲಿಬ್ರಿಟಿ ಎಂಬುದರಲ್ಲಿ ಅನುಮಾನವೇ ಇಲ್ಲ. ಆದರೆ, ಇದು ಸಿಆರ್‌ಪಿಸಿ ಮತ್ತು ಐಪಿಸಿಗೆ ಗೊತ್ತಿಲ್ಲ. ಆರೋಪಿಯಾದರೂ ನ್ಯಾಯಾಧೀಶರು ಅತಿ ಜಾಗೃತವಾಗುವ ಅವಶ್ಯಕತೆ ಇಲ್ಲ ಎಂದ ನ್ಯಾಯಾಲಯವು ದರ್ಶನ್ ಪತ್ನಿ ವಿಜಯಲಕ್ಷ್ಮಿ ಅರ್ಜಿ ವಜಾಗೊಳಿಸಿದೆ.

**ಮುಂದೇನು?:** ವಿಚಾರಣಾಧೀನ ಕೋರ್ಟ್‌ನಲ್ಲಿ ಪ್ರದೋಷ್ ರಾವ್ ಮಾಫಿ ಸಾಕ್ಷಿಯ ವಿಚಾರಣೆ ನಡೆಯಲಿದ್ದು, ಆ ವೇಳೆ ದರ್ಶನ್ ಪರ ವಕೀಲರು ಪಾಟೀ ಸವಾಲಿನ ಮೂಲಕ ಪ್ರಶ್ನೆಗಳನ್ನು ಮಾಡಬಹುದು. ಮಾಫಿ ಸಾಕ್ಷಿ ಖಚಿತವಾದರೆ ದರ್ಶನ್, ಪವಿತ್ರಾ ಗೌಡ ಸೇರಿದಂತೆ ಹಲವರ ಮೇಲಿನ ಆರೋಪ ಸಾಬೀತಾಗುವ ಸಾಧ್ಯತೆ ಪ್ರಮಾಣ ಹೆಚ್ಚಿರುತ್ತದೆ.

## ಶಾಸಕ ಸ್ಥಾನಕ್ಕೆ ಯಶವಂತರಾಯಗೌಡ ರಾಜೀನಾಮೆ

### ಇಂಡಿ, ಚಡಚಣ ತಾಲ್ಲೂಕನ್ನು ಬರಪೀಡಿತವೆಂದು ಘೋಷಣೆ ಮಾಡದ್ದಕ್ಕೆ ಅಸಮಾಧಾನ

**ಬೆಂಗಳೂರು:** ಇಂಡಿ ಹಾಗೂ ಚಡಚಣ ತಾಲ್ಲೂಕನ್ನು ಬರ ಪೀಡಿತ ತಾಲ್ಲೂಕು ಎಂದು ಘೋಷಣೆ ಮಾಡಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿ, ಶಾಸಕ ಸ್ಥಾನಕ್ಕೆ ಯಶವಂತರಾಯ ಗೌಡ ಪಾಟೀಲ್ ರಾಜೀನಾಮೆ ಸಲ್ಲಿಸಿದ್ದಾರೆ.

ಬುಧವಾರ ಬೆಳಗ್ಗೆ ಶಾಸಕ ಯಶವಂತರಾಯ ಗೌಡ ಅವರು ಸ್ಪೀಕರ್ ಜಿಎಸ್ ಪಾಟೀಲ್ ಅವರನ್ನು ಭೇಟಿ ಮಾಡಿ ರಾಜೀನಾಮೆ ಪತ್ರ ಸಲ್ಲಿಕೆ ಮಾಡಿದ್ದಾರೆ. ಇಂಡಿ ಹಾಗೂ ಚಡಚಣ ತಾಲ್ಲೂಕನ್ನು ಬರ ಪೀಡಿತ ಎಂದು ಘೋಷಣೆ ಮಾಡದೆ ಇರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿ ರಾಜೀನಾಮೆ ನೀಡಿದ್ದಾರೆ.



**ಮನವೊಲಿಕೆ ಯತ್ನ:** ಶಾಸಕ ಸ್ಥಾನಕ್ಕೆ ಯಶವಂತರಾಯಗೌಡ ಪಾಟೀಲ್ ರಾಜೀನಾಮೆ ನೀಡಿರುವ ಹಿನ್ನೆಲೆಯಲ್ಲಿ ಮನವೊಲಿಕೆ ಯತ್ನ ನಡೆಯುತ್ತಿದೆ. ಸ್ವತಃ ಸಿಎಂ ಡಿ.ಕೆ ಶಿವಕುಮಾರ್ ಅವರೇ ಶಾಸಕರ ಮನವೊಲಿಕೆ ಪ್ರಯತ್ನಕ್ಕೆ ಮುಂದಾಗಿದ್ದಾರೆ. ವಿಧಾನಸಭೆಯ ಸಿಎಂ ಕಚೇರಿಯಲ್ಲಿ ಮನವೊಲಿಕೆ ಪ್ರಯತ್ನ ನಡೆಸಲಾಗಿದೆ. ಈ ವೇಳೆ ಉದ್ದೇಶಪೂರ್ವಕವಾಗಿ ಕ್ಷೇತ್ರವನ್ನು ಕೈಬಿಡಲಾಗಿದೆ ಎಂದು ಶಾಸಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ ಎಂದು ತಿಳಿದುಬಂದಿದೆ.

**ಸಚಿವ ಸ್ಥಾನ ಸಿಗದೆ ಇದ್ದಿದ್ದಕ್ಕೆ ರಾಜೀನಾಮೆ ನೀಡಿದ್ದ ಶಾಸಕ:** ಈ ಹಿಂದೆ ಸಚಿವ ಸ್ಥಾನ ಸಿಗದೆ ಇದ್ದ ಕಾರಣಕ್ಕಾಗಿ ಯಶವಂತರಾಯ ಗೌಡ ರಾಜೀನಾಮೆ ಸಲ್ಲಿಕೆ ಮಾಡಿದ್ದರು. ಬಳಿಕ ಸಿಎಂ ಡಿಕೆ ಶಿವಕುಮಾರ್ ಅವರು ಮನವೊಲಿಸಿ ರಾಜೀನಾಮೆಯನ್ನು ವಾಪಸ್ ಪಡೆದುಕೊಂಡಿದ್ದರು. ಇದೀಗ ಎರಡನೇ ಬಾರಿ ರಾಜೀನಾಮೆ ಸಲ್ಲಿಕೆ ಮಾಡಿದ್ದಾರೆ.

**ಸದನದಲ್ಲಿ ಪ್ರಸ್ತಾಪ:** ಶಾಸಕ ರಾಜೀನಾಮೆ ವಿಚಾರವನ್ನು ವಿರೋಧ ಪಕ್ಷದ ನಾಯಕ ಆರ್ ಅಶೋಕ್ ವಿಧಾನಸಭೆಯಲ್ಲಿ ಪ್ರಸ್ತಾಪ ಮಾಡಿದರು. ಸರ್ಕಾರಕ್ಕೆ ನಾಚಿಕೆ ಆಗಬೇಕು ಎಂದು ಅಶೋಕ್ ವಾಗ್ದಾಳಿ ನಡೆಸಿದರು. ಈ ವೇಳೆ ಆಡಳಿತ ಮತ್ತು ವಿಪಕ್ಷದ ನಡುವೆ ಮಾತಿನ ಚಕಮಕಿ ನಡೆಯಿತು. ಶಾಸಕರ ರಾಜೀನಾಮೆ ಪತ್ರವನ್ನು ಅಶೋಕ್ ಸದನದಲ್ಲಿ ಪ್ರದರ್ಶನ ಮಾಡಿದರು.

### ರಾಜೀನಾಮೆ ಪತ್ರದಲ್ಲಿ ಏನಿದೆ?

**ವಿಜಯಪುರ ಜಿಲ್ಲೆಯ ನಾನು ಪ್ರತಿನಿಧಿಸುವ ಇಂಡಿ ತಾಲ್ಲೂಕು 2026-27ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ತೀವ್ರ ಬರಗಾಲಕ್ಕೆ ತುತ್ತಾಗಿದೆ. ಆರಂಭದಲ್ಲಿ ಸ್ವಲ್ಪ ಮಳೆ ಬಿದ್ದ ಪ್ರಯುಕ್ತ ರೈತರು ಸಾಲಮಾಡಿ ಬೀಜ, ಗೊಬ್ಬರಗಳನ್ನು ಖರೀದಿಸಿ, ಬಿತ್ತನೆ ಮಾಡಿರುತ್ತಾರೆ. ಆದರೆ, ಸಕಾಲಕ್ಕೆ ಮಳೆಯಾಗದ ಕಾರಣ ಬೆಳೆಗಳು ಬತ್ತಿಹೋಗಿದ್ದು, ಜನ-ಜಾನುವಾರುಗಳಿಗೆ ಕುಡಿಯುವ ನೀರಿನ ತೊಂದರೆ ಉಂಟಾಗಿರುತ್ತದೆ. ಈ ಬಗ್ಗೆ ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳಿಗೆ 28, 8, 2026 ರಂದು ಮನವಿ ಪತ್ರವನ್ನು ಸಲ್ಲಿಸಿ, ಇಂಡಿ ತಾಲ್ಲೂಕನ್ನು ಬರಪೀಡಿತ ತಾಲ್ಲೂಕು ಎಂದು ಘೋಷಿಸುವಂತೆ ಮನವಿ ಪತ್ರ ಸಲ್ಲಿಸಲಾಗಿತ್ತು. ಆದರೆ ವಿಜಯಪುರ ಜಿಲ್ಲೆಯ ಒಟ್ಟು 13 ತಾಲ್ಲೂಕುಗಳ ಪೈಕಿ ನನ್ನ ಇಂಡಿ ಮತ್ತು ಚಡಚಣ ಈ 2 ತಾಲ್ಲೂಕುಗಳನ್ನು ಹೊರತುಪಡಿಸಿ, ಇದುವರೆಗೂ ರಾಜ್ಯದ 188 ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳೆಂದು ಘೋಷಿಸಲಾಗಿರುತ್ತದೆ. ನಾನು ಆಡಳಿತ ಪಕ್ಷದ ಶಾಸಕನಾಗಿದ್ದು, ನಮ್ಮ ಸರ್ಕಾರಕ್ಕೆ ಮುಜಗರವಾಗಬಾರದೆಂದು ಸೂಕ್ಷ್ಮ ಮತಿಯನಾಗಿ ಹಲವಾರು ಬಾರಿ ಮನವಿ ಮಾಡಿಕೊಂಡಿದ್ದೇನೆ. ಆದರೂ ಸಹ ನಮ್ಮ ಮಾತಿಗೆ, ನಮ್ಮ ಭಾವನೆಗಳಿಗೆ ಬೆಲೆ ಇಲ್ಲದಂತಾಗಿದ್ದು, ಈಗಿನ ರಾಜಕೀಯ ವಾತವಾರಣದಲ್ಲಿ ಬಲಾಢ್ಯರಿಗೆ, ಒತ್ತಡ ತಂತ್ರಗಳನ್ನು ಹೆಣೆಯುವವರಿಗೆ ಮನ್ನಣೆ ನೀಡಲಾಗುತ್ತಿದೆ. ನಮ್ಮಂತಹ ಸೌಮ್ಯ ಸ್ವಭಾವದವರಿಗೆ ಯಾವುದೇ ಕೆಲಸಗಳಿಗೆ ಮನ್ನಣೆ ದೊರೆಯುತ್ತಿಲ್ಲ. ಆದ್ದರಿಂದ ನನ್ನ ಕ್ಷೇತ್ರದ ಜನರ ಆಶೆ, ಆಶೋತ್ತರಗಳಿಗೆ ಸ್ಪಂದಿಸಲು ಸಾಧ್ಯವಾಗದ ಕಾರಣ ಸ್ವ ಇಚ್ಛೆಯಿಂದ ರಾಜೀನಾಮೆ ಸಲ್ಲಿಸುತ್ತಿದ್ದೇನೆ ಎಂದು ಪತ್ರದಲ್ಲಿ ಉಲ್ಲೇಖ ಮಾಡಿದ್ದಾರೆ.**

## ಡಿಜೆ ಸಂಗೀತಕ್ಕೆ ಹೆದರಿ ಎರಡನೇ ತರಗತಿಯ ಬಾಲಕಿ ಸಾವು

**ಲಖನೌ:** ಶಾಲೆಯ ಆವರಣದ ಪಕ್ಕದಲ್ಲೇ ಸಾಗುತ್ತಿದ್ದ ಧಾರ್ಮಿಕ ಮೆರವಣಿಗೆಯ ಭಾರೀ ಶಬ್ದದ ಡಿಜೆ ಸಂಗೀತಕ್ಕೆ ಹೆದರಿ ಎರಡನೇ ತರಗತಿಯ ಬಾಲಕಿಯೊಬ್ಬಳು ತರಗತಿಯಲ್ಲಿ ಕುಸಿದುಬಿದ್ದು ಮೃತಪಟ್ಟಿರುವ ದಾರುಣ ಘಟನೆ ಉತ್ತರ ಪ್ರದೇಶದ ಬಲರಾಮ್ ಪುರದ ಡಿವೈನ್ ಪಬ್ಲಿಕ್ ಶಾಲೆಯಲ್ಲಿ ನಡೆದಿದೆ. ಮೃತ ಬಾಲಕಿಯನ್ನು ಸ್ಥಳೀಯ ನಿವಾಸಿ ಸೋನು ತಿವಾರಿ ಎಂಬುವವರ ಪುತ್ರಿ ಎಂದು ಗುರುತಿಸಲಾಗಿದೆ. ಡಿಜೆ ಶಬ್ದದಿಂದಲೇ ಬಾಲಕಿ ಮೃತಪಟ್ಟಿದ್ದಾಳೆ ಎಂದು ಪೋಷಕರು ಆರೋಪಿಸಿದ್ದಾರೆ. ಆದರೆ ಮರಣೋತ್ತರ ಪರೀಕ್ಷೆಯ ಬಳಿಕವೇ ಈ ಬಗ್ಗೆ ಸ್ಪಷ್ಟನೆ ದೊರೆಯಲಿದೆ ಎಂದು ಸ್ಥಳೀಯ ಪೊಲೀಸರು ಮಾಹಿತಿ ನೀಡಿದ್ದಾರೆ.

ಸೋಮವಾರ ಬೆಳಿಗ್ಗೆ ಸುಮಾರು 11 ಗಂಟೆಯ ಸುಮಾರಿಗೆ ಶಾಲೆಯ ಮೊದಲ ಮಹಡಿಯಲ್ಲಿ ಬಾಲಕಿ ತರಗತಿಯಲ್ಲಿ ಕುಳಿತಿದ್ದಾಗ ಈ ದುರಂತ ಸಂಭವಿಸಿದೆ. ಶಾಲೆಯ ಸಮೀಪದಲ್ಲೇ ಗಣಪತಿ ವಿಸರ್ಜನಾ ಮೆರವಣಿಗೆ ಸಾಗುತ್ತಿದ್ದು, ಅತ್ಯಂತ ಗರಿಷ್ಠ ಶಬ್ದದೊಂದಿಗೆ ಡಿಜೆ ಹಾಡುಗಳನ್ನು ಹಾಕಲಾಗಿತ್ತು. ಡಿಜೆಯ ಭಾರಿ ಶಬ್ದ ಮತ್ತು ಕಂಪನ ಯಾವ ಮಟ್ಟದಲ್ಲಿತ್ತೆಂದರೆ ಶಾಲೆಯ ಕಿಟಕಿ ಗಾಜುಗಳು ಸಹ ನಡುಗತೊಡಗಿದ್ದವು. ಈ ವೇಳೆ ಶಬ್ದದ ತೀವ್ರತೆಯನ್ನು ಸಹಿಸಲಾರದೆ ಅಸ್ವಸ್ಥಗೊಂಡ ಬಾಲಕಿ ಸತತ ಮೂರು ಬಾರಿ ಪ್ರಜ್ಞೆ ತಪ್ಪಿ ಬಿದ್ದಿರುವುದು ಶಾಲೆಯ ಸಿಸಿಟಿವಿ ದೃಶ್ಯಾವಳಿಗಳಿಂದ ತಿಳಿದುಬಂದಿದೆ.



**ಆಸ್ಪತ್ರೆಗೆ ರವಾನಿಸಿದರೂ ಫಲಿಸದ ಚಿಕಿತ್ಸೆ:** ಘಟನೆಯ ಕುರಿತು ಮಾತನಾಡಿದ ಶಾಲಾ ಶಿಕ್ಷಕಿಯರಾದ ಇಕ್ರಾ ಖಾನ್ ಹಾಗೂ ಪಮ್ಮಿ ಮಿಶ್ರಾ ಬಾಲಕಿಯನ್ನು ಆಸ್ಪತ್ರೆಗೆ ದಾಖಲಿಸಿದರೂ ಯಾವುದೇ ಪ್ರಯೋಜನವಾಗಲಿಲ್ಲ ಎಂದು ತಿಳಿಸಿದ್ದಾರೆ. "ಡಿಜೆ ಶಬ್ದ ಎಷ್ಟು ಭೀಕರವಾಗಿತ್ತೆಂದರೆ ಶಾಲೆಯ ಕಿಟಕಿಗಳು ನಡುಗುತ್ತಿದ್ದವು. ಮೆರವಣಿಗೆಯ ಶಬ್ದ ಕೇಳಿ ಕೆಲವು ಮಕ್ಕಳು ಗೊಂದಲಕ್ಕೊಳಗಾದರೆ, ಈ ಬಾಲಕಿ ತೀವ್ರ ಅಸ್ವಸ್ಥಗೊಂಡಿರುವುದು ನಮ್ಮ ಗಮನಕ್ಕೆ ಬಂತು. ತಕ್ಷಣವೇ ಆಕೆಯನ್ನು ಕೆಳಮಹಡಿಗೆ ಕರೆತಂದು ಆಸ್ಪತ್ರೆಯ ತುರ್ತು ನಿಗಾ ಘಟಕಕ್ಕೆ ರವಾನಿಸಿದೆವು. ಆದರೆ ಆಕೆ ಆಗಲೇ ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿದರು" ಎಂದು ಮಾಹಿತಿ ನೀಡಿದ್ದಾರೆ.

**ಕುಟುಂಬಸ್ಥರ ಭಾರಿ ಆರೋಪ, ತನಿಖೆಗೆ ಆದೇಶ:** ಅತಿಯಾದ ಶಬ್ದ ಮತ್ತು ಭಾರಿ ಕಂಪನದಿಂದಾಗಿಯೇ ಮಗುವಿಗೆ ಹೃದಯಾಘಾತ ಸಂಭವಿಸಿ ಸಾವನ್ನಪ್ಪಿದ್ದಾಳೆ ಎಂದು ಬಾಲಕಿಯ ಕುಟುಂಬಸ್ಥರು ಆರೋಪಿಸಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಸಿಸಿಟಿವಿ ದೃಶ್ಯಾವಳಿಗಳನ್ನು ವಶಕ್ಕೆ ಪಡೆದಿರುವ ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿರುವ ಪೊಲೀಸ್ ಅಧಿಕಾರಿಗಳು, "ಡಿಜೆ ಶಬ್ದವೇ ಸಾವಿಗೆ ಕಾರಣವೇ ಅಥವಾ ಬಾಲಕಿಗೆ ಬೇರೆ ಯಾವುದಾದರೂ ಆಂತರಿಕ ಅನಾರೋಗ್ಯದ ಸಮಸ್ಯೆ ಇತ್ತೇ ಎಂಬ ಬಗ್ಗೆ ತನಿಖೆ ನಡೆಯುತ್ತಿದೆ. ಮರಣೋತ್ತರ ಪರೀಕ್ಷೆಯ ವೈದ್ಯಕೀಯ ವರದಿ ಬಂದ ನಂತರವಷ್ಟೇ ಸಾವಿಗೆ ನಿಖರ ಕಾರಣ ತಿಳಿಯಲಿದೆ" ಎಂದು ಸ್ಪಷ್ಟಪಡಿಸಿದ್ದಾರೆ.

## ವೃದ್ಧೆಗೆ ಕೂಲಿಂಗ್ಲಾಸ್ ತೊಡಿಸಿದ ತಮಿಳುನಾಡು ಸಿಎಂ

**ಚೆನ್ನೈ :** ಬೆಳ್ಳಿತೆರೆಯಿಂದ ರಾಜಕೀಯಕ್ಕೆ ಬಂದು ಮೊದಲ ಪ್ರಯತ್ನದಲ್ಲೇ ಗೆದ್ದು ಸದ್ದು ಮಾಡುತ್ತಿರುವ ತಮಿಳುನಾಡು ಮುಖ್ಯಮಂತ್ರಿ ಜೋಸೆಫ್ ವಿಜಯ್ ಅವರ ಆಡಳಿತ ದಿನವೂ ಒಂದಲ್ಲಾ ಒಂದು ರೀತಿಯಲ್ಲಿ ಸದ್ದನ್ನು ಮಾಡುತ್ತಿದೆ. ಇತ್ತೀಚೆಗೆ, ಅವರ ಪಾರ್ಟಿಯ (TVK) ಅಭಿಮಾನಿಗಳು, ಭಾವೀ ಪ್ರಧಾನಿ ಎಂದು ಬಿಂಬಿಸಿ, ಸೋಶಿಯಲ್ ಮೀಡಿಯಾದಲ್ಲಿ ಸದ್ದು ಮಾಡಿದ್ದರು.

ಈಗ, ವಿಜಯ್ ಅವರ ಒಂದು ನಡೆ, ಮತ್ತೆ ಸಾಮಾಜಿಕ ಜಾಲತಾಣದಲ್ಲಿ ಸದ್ದನ್ನು ಮಾಡುತ್ತಿದೆ. ತನ್ನನ್ನು ನೋಡಲು ಬಂದಿದ್ದ ವೃದ್ಧೆಯ ಪ್ರೀತಿಗೆ ಕರಗಿದ ಸಿಎಂ ವಿಜಯ್, ತಾವು ಧರಿಸಿಕೊಂಡಿದ್ದ ದುಬಾರಿ ಡಿಯೋರ್ (Christian Dior) ಸನ್‌ಗ್ಲಾಸ್, ಅನ್ನು ಉಡುಗೊರೆಯಾಗಿ ನೀಡಿದ್ದಾರೆ. ಮುಖ್ಯಮಂತ್ರಿಗಳ ಈ ನಡೆಗೆ, ವೃದ್ಧೆ ಮೂಕವಿಸ್ಮಿತರಾಗಿದ್ದಾರೆ.

**ವೃದ್ಧೆಗೆ ಕೂಲಿಂಗ್ಲಾಸ್ ತೊಡಿಸಿದ ತಮಿಳುನಾಡು ಸಿಎಂ ವಿಜಯ್ ಜೋಸೆಫ್:** ಸಿಎಂ ವಿಜಯ್ ಅವರ ಜನಪ್ರಿಯತೆ ಮತ್ತು ಸಾರ್ವಜನಿಕ ಸಂಪರ್ಕ ಅವರ ರಾಜಕೀಯ ಜೀವನದಲ್ಲೂ ಪ್ರಮುಖವಾಗಿ ಹೈಲೆಟ್ ಆಗುತ್ತಿದೆ. ಅಧಿಕೃತ ಪ್ರವಾಸದ ವೇಳೆ, ತಮ್ಮ ವಾಹನವನ್ನು ನಿಲ್ಲಿಸಲು ಹೇಳಿ, ವೃದ್ಧೆಯೊಬ್ಬರಿಗೆ, ತಾನು ಧರಿಸಿದ್ದ ಸನ್‌ಗ್ಲಾಸ್ ಅನ್ನು ಉಡುಗೊರೆಯಾಗಿ ನೀಡಿದ್ದಾರೆ. ಕೂಲಿಂಗ್ಲಾಸ್ ಅನ್ನು ತಾವೇ ಖುದ್ದಾಗಿ, ವೃದ್ಧೆಗೆ ಸಿಎಂ ವಿಜಯ್ ತೊಡಿಸಿದ್ದಾರೆ. ಇದರ ವಿಡಿಯೋ ಮತ್ತು ಇಮೇಜ್, ಸಾಮಾಜಿಕ ತಾಣದಲ್ಲಿ ವೈರಲ್ ಆಗುತ್ತಿದೆ.

ಸೇಲಂ ಜಿಲ್ಲೆಯಲ್ಲಿರುವ ಮೆಟ್ಟೂರು, ಜಲವಿದ್ಯುತ್ ಉತ್ಪಾದನಾ ಕೇಂದ್ರವನ್ನು ಪರಿಶೀಲಿಸಲು ವಿಜಯ್ ಹೋಗಿದ್ದರು. ಜೊತೆಗೆ, ಕೃಷಿ ಚಟುವಟಿಕೆಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಮೆಟ್ಟೂರು ಸ್ಟ್ಯಾನ್ಲಿ ಜಲಾಶಯದ ಗೇಟ್'ಗಳನ್ನು ತೆರೆದರು. ಆ ಕಾರ್ಯಕ್ರಮದ ನಂತರ, ವಿಮಾನ ನಿಲ್ದಾಣಕ್ಕೆ ಹಿಂದಿರುಗುವ ವೇಳೆ, ರಸ್ತೆಬದಿಯ ತೋಟದ ಮನೆಯೊಂದರ ಬಳಿ ವಾಹನವನ್ನು ಸಡನ್ನಾಗಿ ನಿಲ್ಲಿಸಿದರು.

ಸಮಾಲೋಚನೆ ಸುದ್ದಿ
ಕನ್ನಡ ದಿನ ಪತ್ರಿಕೆ
SAMALOCHANE RANEBENNURSUDDI
Kannada Daily Morning

# ಪೌರಕಾರ್ಮಿಕರಿಗೆ ಪ್ರತಿದಿನ ಗೌರವ ಸಿಗಬೇಕು: ಪೌರಾಯುಕ್ತ ಇಂಗಳಗಿ

**ಸಮಾಲೋಚನೆ ಸುದ್ದಿ ರಾಣೇಬೆನ್ನೂರು**

ಜಗತ್ತು ಎದ್ದೇಳುವ ಮುನ್ನವೇ ನಗರವನ್ನು ಸ್ವಚ್ಛವಾಗಿಡಲು ಪೌರಕಾರ್ಮಿಕರು ತಮ್ಮ ಕರ್ತವ್ಯಕ್ಕೆ ಹಾಜರಾಗುತ್ತಾರೆ. ಅವರ ಶ್ರಮಕ್ಕೆ ಹೂವಿನ ಹಾಸಿಗೆ ಹಾಸುವಷ್ಟು ಗೌರವ ನೀಡಬೇಕು ಎಂದು ಪೌರಾಯುಕ್ತ ಎಫ್.ಐ. ಇಂಗಳಗಿ ಹೇಳಿದರು.

ನಗರದವರ್ತಕರಸಮುದಾಯಭವನದಲ್ಲಿಬುಧವಾರಪೌರಕಾರ್ಮಿಕರ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಆರೋಗ್ಯವಂತ ಸಮಾಜ ನಿರ್ಮಾಣದಲ್ಲಿ ಪೌರಕಾರ್ಮಿಕರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಪ್ರತಿದಿನ ಬೆಳಗಿನ ಜಾವದಿಂದಲೇ ಸ್ವಚ್ಛತಾ ಕಾರ್ಯದಲ್ಲಿ ತೊಡಗಿಸಿಕೊಂಡು ನಗರದ ಸ್ವಚ್ಛತೆ ಹಾಗೂ ಸಾರ್ವಜನಿಕರ ಆರೋಗ್ಯ ಕಾಪಾಡುವಲ್ಲಿ ಅವರು ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಹೀಗಾಗಿ ಪೌರಕಾರ್ಮಿಕರನ್ನು ಒಂದು ದಿನ



ಮಾತ್ರ ಸ್ಮರಿಸುವ ಬದಲು ಪ್ರತಿದಿನವೂ ಗೌರವಿಸುವ ಮನೋಭಾವ ಸಮಾಜದಲ್ಲಿ ಬೆಳೆಸಿಕೊಳ್ಳಬೇಕು ಎಂದರು.

ಪೌರಕಾರ್ಮಿಕರು ತಮ್ಮ ಆರೋಗ್ಯದ ಬಗ್ಗೆಯೂ ಹೆಚ್ಚಿನ ಕಾಳಜಿ ವಹಿಸಬೇಕು. ತಮ್ಮ ಭವಿಷ್ಯವನ್ನು ಉತ್ತಮವಾಗಿ ರೂಪಿಸಿಕೊಳ್ಳುವುದರ ಜೊತೆಗೆಮಕ್ಕಳಿಗೆಗುಣಮಟ್ಟದಶಿಕ್ಷಣಕೊಡಿಸಿ,ಅವರನ್ನುಉನ್ನತಸ್ಥಾನಕ್ಕೆ ಕೊಂಡೊಯ್ಯುವನಿಟ್ಟಿನಲ್ಲಿಮುಂದಾಗಬೇಕುಎಂದುಸಲಹೆನೀಡಿದರು.

ಾರ್ಯಕ್ರಮದಲ್ಲಿ ಮಧು ಕಂಬಳ್ಳಿ ರಾಘವೇಂದ್ರ ಗಾವಡೆ, ಪೌರ ಸೇವಾ ನೌಕರರ ಸಂಘದ ಜಿಲ್ಲಾ ಅಧ್ಯಕ್ಷ ಏಳೂಕೋಟೆಪ್ಪ ಗೋಣಿಬಸಮ್ಮನವರ, ಮಲೇಶಪ್ಪ ಮೆಣಿಸನಹಾಳ, ಫುಟ್ಟಪ್ಪ ಮರಿಯಮ್ಮನವರ, ಕರಬಸಪ್ಪ ದಾಸಪ್ಪನವರ, ನಿಂಗಪ್ಪ ಮುದಿಕರಿಯಪ್ಪನವರ, ಮಹೇಶ್ವರ ಕೋಡಬಾಳ, ಪ್ರಭು ಬಾಳೆಹೊನ್ನೂರು ಸೇರಿದಂತೆ ಪೌರಕಾರ್ಮಿಕರು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

## ಮಾರುಕಟ್ಟೆಯ ಖ್ಯಾತಿಗೆ ಕಪ್ಪು ಚುಕ್ಕೆ ಬರದಂತೆ ವಹಿವಾಟು ನಡೆಸೋಣ: ಸುರೇಶಗೌಡ ಪಾಟೀಲ

**ಸಮಾಲೋಚನೆ ಸುದ್ದಿ ಬ್ಯಾಡಗಿ**

ದೇಶದ ವಿವಿಧ ಮೂಲೆಗಳಿಂದ ಬ್ಯಾಡಗಿ ಮಾರುಕಟ್ಟೆಯನ್ನು ನಂಬಿ ಸಾವಿರಾರು ರೈತರು ತಮ್ಮ ಉತ್ಪನ್ನಗಳನ್ನು ಮಾರಾಟಕ್ಕೆ ತರು ತ್ತಿದ್ದಾರೆ. ಅವರ ಶ್ರಮದಿಂದಲೇ ನಮ್ಮೆಲ್ಲರ ಬದುಕು ಸಾಗುತ್ತಿದೆ. ಹೀಗಾಗಿ ರೈತರಿಗೆ ಮಾರುಕಟ್ಟೆಯಲ್ಲಿಯಾವುದೇರೀತಿಯಅನ್ಯಾಯಅಥವಾಮೋಸವಾಗದಂತೆ ನೋಡಿಕೊಳ್ಳುವುದು ಪ್ರತಿಯೊಬ್ಬ ವರ್ತಕನ ಜವಾಬ್ದಾರಿಯಾಗಿದೆ ಎಂದು ವರ್ತಕರ ಸಂಘದ ಅಧ್ಯಕ್ಷ ಹಾಗೂ ಮಾಜಿ ಶಾಸಕ ಸುರೇಶಗೌಡ ಪಾಟೀಲ ಹೇಳಿದರು.

ಪಟ್ಟಣದ ಶ್ರೀ ಸಿದ್ದೇಶ್ವರ ಕನ್ವೆಕ್ಷನ್ ಹಾಲ್‌ನಲ್ಲಿ ಆಯೋಜಿಸಲಾಗಿದ್ದ ಬ್ಯಾಡಗಿ ವರ್ತಕರ ಸಂಘದ 48ನೇ ಸಾಮಾನ್ಯ ಸಭೆಯಲ್ಲಿ ಮಾತನಾಡಿದ ಅವರು, ಬ್ಯಾಡಗಿ ಮಾರುಕಟ್ಟೆ ದೇಶ–ವಿದೇಶಗಳಲ್ಲಿ ತನ್ನದೇ ಆದ ಖ್ಯಾತಿ ಹೊಂದಿದೆ. ಈ ಹೆಸರಿಗೆ ಯಾವುದೇ ರೀತಿಯ ಕಪ್ಪು ಚುಕ್ಕೆ ಬಾರದಂತೆ ಪ್ರಾಮಾಣಿಕವಾಗಿ ವ್ಯಾಪಾರ–ವಹಿವಾಟು ನಡೆಸಬೇಕು. ರೈತರು ಮತ್ತು ವರ್ತಕರ ನಡುವಿನ ವಿಶ್ವಾಸ ಮತ್ತಷ್ಟು ಗಟ್ಟಿಯಾಗುವ ರೀತಿಯಲ್ಲಿ ಎಲ್ಲರೂ ನಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಮಾರುಕಟ್ಟೆ ವಿಸ್ತರಣೆಗೆ ಜಾಗದ ಬೇಡಿಕೆ:ಬ್ಯಾಡಗಿ ಮೆಣಸಿನಕಾಯಿ ಮಾರುಕಟ್ಟೆಯ ವ್ಯಾಪ್ತಿ ದಿನದಿಂದ ದಿನಕ್ಕೆ ವಿಸ್ತರಿಸುತ್ತಿದ್ದು, ಪ್ರಸ್ತು ತ ಸುಮಾರು 1 ಸಾವಿರಕ್ಕೂ ಹೆಚ್ಚು ವ್ಯಾಪಾರಸ್ಥರು ವಹಿವಾಟು ನಡೆಸುತ್ತಿದ್ದಾರೆ. ಆದ–ರೆ ಮಾರುಕಟ್ಟೆ ಪ್ರದೇಶದಲ್ಲಿ ಎಲ್ಲ ವ್ಯಾಪಾರ ಸ್ಥರಿಗೂ ಸ್ವಂತ ನಿವೇಶನದ ಸೌಲಭ್ಯವಿಲ್ಲದ ಕಾರಣ, ದುಬಾರಿ ಬಾಡಿಗೆ ನೀಡಿ ವ್ಯಾಪಾರ ನಡೆಸುವ ಪರಿಸ್ಥಿತಿ ನಿರ್ಮಾಣ ವಾಗಿದೆ, ಮಾರುಕಟ್ಟೆಯ ಪಕ್ಕದಲ್ಲಿರುವ ರೈತರ ಜಮೀನುಗಳನ್ನು ಸರ್ಕಾರದ ಮೂಲಕ ಖರೀದಿಸಿ, ಅವುಗಳನ್ನು ವ್ಯಾಪಾರಸ್ಥರಿಗೆ ಹಂಚಿಕೆ ಮಾಡಿದರೆ ಮಾರುಕಟ್ಟೆ ವಿಸ್ತರಣೆಗೆ ಅನುಕೂಲವಾಗಲಿದೆ.ಈ ವ್ಯವಸ್ಥೆ ಕಲ್ಪಿಸಿದಲ್ಲಿ ಭವಿಷ್ಯದಲ್ಲಿ ಮೆಗಾ ಮಾರುಕಟ್ಟೆಗೆ ಸ್ಥಳಾಂತರ ಗೊಳ್ಳುವ ಉದ್ದೇಶವನ್ನು ಕೈಬಿಡಲು ಸಿದ್ಧರಿದ್ದೇವೆ ಎಂದು ಸಭೆಯಲ್ಲಿ ದಲಾಲರು ವರ್ತಕರು ಆಗ್ರಹಿಸಿದರು.

ಸಮಿತಿ ರಚನೆ ಅಗತ್ಯವಿದೆ:ಇದಕ್ಕೆ ಪ್ರತಿಕ್ರಿಯಿಸಿದ ಸುರೇಶಗೌಡ ಪಾಟೀಲ, ಮಾರುಕಟ್ಟೆ ಪಕ್ಕದಲ್ಲಿರುವ ರೈತರು ತಮ್ಮ ಜಮೀ ನು ಗಳನ್ನು ನೀಡಲು ಸಿದ್ಧರಿದ್ದರೆ ನಮ್ಮ ಅಭ್ಯಂತರವಿಲ್ಲ. ಆದರೆ ಈ ವಿಚಾರದಲ್ಲಿ ಹಲವು

> **ಯಾವುದೇ ಸರಕಾರ ಅಧಿಕಾರಕ್ಕೆ ಬಂದರೂ ಬ್ಯಾಡಗಿ ಮೆಣಸಿನಕಾಯಿಯ ಮೂಲ ತಳಿ ಸಂರಕ್ಷಣೆ ಹಾಗೂ ಅಭಿವೃದ್ಧಿಗೆ ನಿರೀಕ್ಷಿತ ಮಟ್ಟದಲ್ಲಿ ಒತ್ತು ನೀಡುತ್ತಿಲ್ಲ. ಇದೇ ಪರಿಸ್ಥಿತಿ ಮುಂದುವರಿದರೆ ಮುಂದಿನ ದಿನಗಳಲ್ಲಿ ಬ್ಯಾಡಗಿ ಮೂಲ ತಳಿ ನಶಿಸಿ ಹೋಗುವ ಆತಂಕವಿದೆ. ಮೂಲ ತಳಿಯ ಸಂರಕ್ಷಣೆಗಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಸರಕಾರದ ಮೇಲೆ ಒತ್ತಡ ತರುವ ಮೂಲಕ ತಳಿ ಉಳಿಸುವ ಪ್ರಯತ್ನ ಮಾಡಬೇಕಿದೆ.**
>
> **। ಸುರೇಶಗೌಡ ಪಾಟೀಲ ವರ್ತಕರ ಸಂಘದ ಅಧ್ಯಕ್ಷ ಹಾಗೂ ಮಾಜಿ ಶಾಸಕ**

ಆಡಳಿತಾತ್ಮಕ ಹಾಗೂ ಕಾನೂನು ಪ್ರಕ್ರಿ ಯೆ ಗಳಿದ್ದು, ಸರ್ಕಾರದ ಹಂತದಲ್ಲಿ ಕ್ರಮ ಕೈಗೊಳ್ಳಬೇಕಾಗಿದೆ ಎಂದರು. ಈ ಕುರಿತು ಸಮಿತಿ ರಚಿಸಿ, ಸ್ಥಳೀಯ ಶಾಸಕರು ಹಾಗೂ ಸಚಿವರನ್ನು ಭೇಟಿ ಮಾಡಿ ಮಾರುಕಟ್ಟೆ ವಿಸ್ತರಣೆಗೆ ಅಗತ್ಯವಿರುವ ಜಾಗವನ್ನು ಮಂಜೂರು ಮಾಡಿಸುವ ನಿಟ್ಟಿನಲ್ಲಿ ಸರ್ಕಾರದ ಗಮನ ಸೆಳೆಯೋಣ. ವ್ಯಾಪಾರಸ್ಥರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಸಂಘಟಿತವಾಗಿ ಪ್ರಯತ್ನಿಸೋಣ ಎಂದು ಅವರು ಭರವಸೆ ನೀಡಿದರು.

ಸೆಸ್ ತಿಂಗಳಿಗೊಮ್ಮೆ ಕಟ್ಟಿದರೆ ಒಳ್ಳೆದು:ಪ್ರಸ್ತುತ ಪ್ರತಿ ವಾರ ಎಪಿಎಂಸಿಗೆ ಸೆಸ್ (ಮಾರುಕಟ್ಟೆಶುಲ್ಕ)ಪಾವತಿಸುತ್ತಿದ್ದು,ಮೆಣಸಿನಕಾಯಿಸೀಜನ್‌ಸಂದರ್ಭದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ವಹಿವಾಟು ನಡೆಯುವುದರಿಂದ ವಾರಕ್ಕೊಮ್ಮೆ ಸೆಸ್ ಭರಣ ಮಾಡು ವುದು ದಲಾಲರಿಗೆ ಕಷ್ಟವಾಗುತ್ತಿದೆ. ಆದ್ದರಿಂದ ತಿಂಗಳಿಗೊಮ್ಮೆ ಸೆಸ್ ಪಾವತಿಸಲು ಅವಕಾಶ ಕಲ್ಪಿಸಬೇಕು ಎಂದು ದಲಾಲರು ಸಭೆಯಲ್ಲಿ ಆಗ್ರಹಿಸಿದರು.ದಲಾಲರ ಮನವಿಗೆ ಪ್ರತಿಕ್ರಿಯಿಸಿದ ನಿರ್ದೇಶಕ ಸತೀಶಗೌಡ ಪಾಟೀ, ಈ ಕುರಿತು ಎಪಿಎಂಸಿ ಅಧಿಕಾ ರಿಗಳ ಗಮನಕ್ಕೆ ತಂದು, ಸಾಧ್ಯವಿರುವ ಕ್ರಮ ಕೈಗೊಳ್ಳುವಂತೆ ಮನವಿ ಮಾಡುವುದಾಗಿ ತಿಳಿಸಿದರು. ಸಭೆಯಲ್ಲಿ ವರ್ತಕರ ಸಂಘದ ಪದಾಧಿಕಾರಿಗಳು, ದಲಾಲರು, ವ್ಯಾಪಾರಸ್ಥರು ಸೇರಿದಂತೆ ಹಲವು ಪ್ರಮುಖರು ಉಪಸ್ಥಿತರಿದ್ದರು.




## ಆರೋಗ್ಯವಂತರು ಸ್ವಯಂಪ್ರೇರಿತರಾಗಿ ರಕ್ತದಾನಕ್ಕೆ ಮುಂದಾಗಬೇಕು: ವಿರೂಪಾಕ್ಷಪ್ಪ ಬಳ್ಳಾರಿ

**ಸಮಾಲೋಚನೆ ಸುದ್ದಿ ಬ್ಯಾಡಗಿ**

ರಕ್ತದಾನವು ಸಮಾಜಮುಖಿ ಸೇವೆಯ ಪ್ರಮುಖ ಭಾಗವಾಗಿದ್ದು, ತುರ್ತು ಸಂದರ್ಭದಲ್ಲಿ ರಕ್ತದ ಅವಶ್ಯಕತೆ ಇರುವವರಿಗೆ ನೆರವಾಗಲು ಪ್ರತಿಯೊಬ್ಬರೂ ಸ್ವಯಂಪ್ರೇರಿತರಾಗಿ ರಕ್ತದಾನ ಮಾಡುವ ಮನೋಭಾವ ಬೆಳೆಸಿಕೊಳ್ಳಬೇಕು. ಆರೋಗ್ಯವಂತರು ರಕ್ತದಾನ ಮಾಡುವ ಮೂಲಕ ಮಾನವೀಯ ಸೇವೆಗೆ ಕೈಜೋಡಿಸಬೇಕು ಎಂದು ಮಾಜಿ ಶಾಸಕ ಹಾಗೂ ಬಿಜೆಪಿ ಜಿಲ್ಲಾಧ್ಯಕ್ಷ ವಿರೂಪಾಕ್ಷಪ್ಪ ಬಳ್ಳಾರಿ ಮನವಿ ಮಾಡಿದರು.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಹುಟ್ಟುಹಬ್ಬದ ಅಂಗವಾಗಿ ಬಿಜೆಪಿ ಬ್ಯಾಡಗಿ ಮಂಡಲದ ವತಿಯಿಂದ ಬುಧವಾರ ಪಟ್ಟಣ ದ ಚಾವಡಿ ರಸ್ತೆಯಲ್ಲಿರುವ ಅಟಲ್ ಬಿಹಾರಿ ವಾಜಪೇಯಿ ರಂಗಮಂದಿರದಲ್ಲಿ ಆಯೋಜಿಸಿದ್ದ ಸ್ವಯಂಪ್ರೇರಿತ ರಕ್ತದಾನ ಶಿಬಿರ ವನ್ನು ಉದ್ಘಾಟಿಸಿ ಅವರು ಮಾತನಾಡಿದರು. ರಕ್ತಕ್ಕೆ ಪರ್ಯಾಯವಾಗಿ ಯಾವುದೇ ಕೃತಕ ವಸ್ತುವನ್ನು ಸೃಷ್ಟಿಸಲು ಸಾಧ್ಯವಿಲ್ಲ. ಅಪಘಾತ, ಶಸ್ತ್ರಚಿಕಿತ್ಸೆ, ಹೆರಿಗೆ ಸೇರಿದಂತೆ ವಿವಿಧ ತುರ್ತು ಸಂದರ್ಭಗಳಲ್ಲಿ ರಕ್ತದ ಅವಶ್ಯಕತೆ ಎದುರಾಗುತ್ತದೆ. ಇಂತಹ ಸಂದರ್ಭದಲ್ಲಿ ಸಮಯಕ್ಕೆ ಸರಿಯಾಗಿ ರಕ್ತ ದೊರೆತರೆ ಅಮೂಲ್ಯ ಜೀವವನ್ನು ಉಳಿಸಲು ಸಾಧ್ಯವಾಗುತ್ತದೆ. ಆದ್ದರಿಂದ ಯುವಕರು ಸೇರಿದಂತೆ ಆರೋಗ್ಯವಂತ ಪ್ರತಿಯೊಬ್ಬರೂ ರಕ್ತದಾ ನ ಮಾಡುವ ಮೂಲಕ ಸಮಾಜಕ್ಕೆ ತಮ್ಮ ಕೊಡುಗೆ ನೀಡಬೇಕು ಎಂದರು.

ಬಿಜೆಪಿ ತಾಲೂಕಾಧ್ಯಕ್ಷ ನಿಂಗಪ್ಪ ಬಟ್ಟಲಕಟ್ಟಿ ಮಾತನಾಡಿ, ರಕ್ತದಾನವುಯಾವುದೇಪ್ರತಿಫಲದನಿರೀಕ್ಷೆಯಿಲ್ಲದೆಮತ್ತೊಬ್ಬರ ಜೀವ ಉಳಿಸುವ ಮಹತ್ವದ ಸೇವೆಯಾಗಿದೆ. ರಕ್ತದಾನ ಕುರಿತು ಜನರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಇಂತಹ ಶಿಬಿರಗಳನ್ನು ಆಯೋಜಿಸಲಾಗುತ್ತಿದೆ. ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಸ್ವಯಂಪ್ರೇರಿತರಾಗಿ ರಕ್ತದಾನಕ್ಕೆ ಮುಂದಾಗಬೇಕು ಎಂದು ಕರೆ ನೀಡಿದರು. ಶಿಬಿರದಲ್ಲಿ ಬಿಜೆಪಿ ಮುಖಂಡರು, ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಸೇರಿದಂತೆ ಹಲವರು ಭಾಗವಹಿಸಿ ರಕ್ತದಾನ ಮಾಡಿದರು.



## ಸಾವಿರಾರು ಕುಟುಂಬಗಳ ದುಗುಡ, ದುಮ್ಮಾನ ದೂರ

**ಹಾನಗಲ್:** ನ್ಯಾಯಾಲಯದಿಂದ ಆದೇಶ ತಂದು ಯಾವುದೇ ಸಂದರ್ಭದಲ್ಲಾದರೂ ತಮ್ಮನ್ನು ಒಕ್ಕಲೆಬ್ಬಿಸಲಾಗುತ್ತದೆ ಎನ್ನುವ ಭಯದಲ್ಲಿದ್ದ ತಾಲೂಕಿನ ಸಾವಿರಾರು ಕುಟುಂಬಗಳ ದುಗುಡ, ದುಮ್ಮಾನ ದೂರವಾಗಿದೆ ಎಂದು ಶಾಸಕ, ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷ ಶ್ರೀನಿವಾಸ ಮಾನೆ ಹೇಳಿದರು.

ತಾಲೂಕಿನ ಕಿರವಾಡಿ ಗ್ರಾಮದಲ್ಲಿ ಇತ್ತೀಚೆಗೆ ನಡೆದ ಸಮಾರಂಭದಲ್ಲಿ ಕಂದಾಯ ಗ್ರಾಮ ಮತ್ತು ಉಪ ಗ್ರಾಮ ಫಲಾನುಭವಿಗಳಿಗೆ ಶಾಶ್ವತ ಮನೆ ಮಾಲಿಕತ್ವದ ಹಕ್ಕುಪತ್ರ ವಿತರಿಸಿ ಅವರು ಮಾತನಾಡಿದರು. 2, 3 ತಲೆಮಾರಿನಿಂದ ಮನೆ ಕಟ್ಟಿಕೊಂಡು ವಾಸವಿದ್ದರೂ ಸಹ 13 ಸಾವಿರಕ್ಕೂ ಹೆಚ್ಚು ಕುಟುಂಬಗಳಿಗೆ ಮಾಲಿಕತ್ವ ಇರಲಿಲ್ಲ. ಹಿಂದೆ 2013 ರಲ್ಲಿ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಗಳಿದ್ದ ಸಂದರ್ಭದಲ್ಲಿ ಕಾನೂನಿಗೆ ತಿದ್ದುಪಡಿ ತಂದು ಸರ್ಕಾರಿ ಮತ್ತು ಖಾಸಗಿ ಜಮೀನುಗಳಲ್ಲಿ ದಾಖಲೆ ಇಲ್ಲದೇ ವಾಸಿಸುತ್ತಿರುವ ಕುಟುಂಬಗಳಿಗೆ ಹಕ್ಕುಪತ್ರ ನೀಡುವ ಅವಕಾಶ ಕಲ್ಪಿಸಿದ್ದರೂ ಕೂಡ ನಂತರ ಆಡಳಿತಕ್ಕೆ ಬಂದ ಬಿಜೆಪಿ ಸರ್ಕಾರ ಗಮನ ಹರಿಸಿ ಬಡವರ ಕಣ್ಣೀರು ಒರೆಸುವ ಪ್ರಯತ್ನ ಮಾಡಿರಲಿಲ್ಲ ಎಂದರು.

ತಾಲೂಕಾ ತಹಶೀಲ್ದಾರ್ ವಿಠ್ಠಲ್ ಚೌಗಲಾ ಮಾತನಾಡಿ ತಾಲೂಕಿನಲ್ಲಿ 151 ಕಂದಾಯ ಗ್ರಾಮ, ಉಪ ಗ್ರಾಮಗಳನ್ನು ಹೊಸದಾಗಿ ರಚನೆ ಮಾಡಲಾಗಿದ್ದು, 7,700 ಕ್ಕೂ ಹೆಚ್ಚು ಕುಟುಂಬಗಳಿಗೆ ಮನೆ ಮಾಲಿಕತ್ವದ ಹಕ್ಕುಪತ್ರ ನೀಡಲು ಸರ್ಕಾರದ ಅನುಮೋದನೆ ದೊರಕಿಸಲಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಕಿರವಾಡಿ ಗ್ರಾಮದ 124 ಮತ್ತು ಕಲಗುಡ್ಡಿ ಗ್ರಾಮದ 41 ಫಲಾನುಭವಿಗಳಿಗೆ ಹಕ್ಕುಪತ್ರ ವಿತರಿಸಲಾಯಿತು. ಗ್ಯಾರಂಟಿ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಹನುಮಂತಪ್ಪ ಮರಗಡಿ, ತಾಲೂಕಾಧ್ಯಕ್ಷ ವೀರಪ್ಪ ಬೈಲವಾಳ, ಕರ್ನಾಟಕ ಹಾಲು ಉತ್ಪಾದಕರ ಸಂಘದ ನಿರ್ದೇಶಕ ಚಂದ್ರಪ್ಪ ಜಾಲಗಾರ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜು ಗೊರಣ್ಣನವರ, ತಾಪಂ ಮಾಜಿ ಸದಸ್ಯ ಫಯಾಜ್ ಲೋಹಾರ, ಮುಖಂಡರಾದ ಕೊಟ್ರಗೌಡ ಪಾಟೀಲ, ಶಂಕ್ರಪ್ಪ ಹಾದಿಮನಿ, ಯಲ್ಲಪ್ಪ ಕಲ್ಲೇರ, ಸುನೀಲಗೌಡ ಪಾಟೀಲ, ರಾಮಚಂದ್ರ ಕಲ್ಲೇರ, ಸಿದ್ದರಾಮಪ್ಪ ಕೊಟ್ರಳ್ಳಿ, ಕುಮಾರಸ್ವಾಮಿ ಹಿರೇಮಠ, ಹನುಮಂತ ಗುಲಗಂಜಿ, ಮಾಲತೇಶ ಹೊನ್ನಣ್ಣನವರ, ಪ್ರಕಾಶ ವಡ್ಡರ, ರಾಮಣ್ಣ ಹರಿಜನ, ಮಹದೇವಪ್ಪ ತಳವಾರ, ಶಿವಲಿಂಗಪ್ಪ ಕುಬಟೂರ, ಮಾರುತಿ ಮುಖನವರ, ನಿರಂಜನ ಪಾಟೀಲ, ಜಗದೀಶಗೌಡ ಪಾಟೀಲ, ಚಂದ್ರಶೇಖರ ತಳವಾರ, ಚಂದ್ರಪ್ಪ ಪಾಟೀಲ, ಬಸವರಾಜ ಚವ್ಹಾಣ ಇದ್ದರು.



## ಸಮಾಜದ ಕಟ್ಟಡ ಕಡೆಯ ವ್ಯಕ್ತಿಗೂ ಕಾನೂನು ಸೇವೆಗಳ ಯೋಜನೆ ತಿಳಿಸಿ

**ಹಾವೇರಿ:** ಅರೆನ್ಯಾಯಿಕ ಸ್ವಯಂ ಸೇವಕರು ಸಮಾಜದ ಕಟ್ಟಕಡೆಯ ವ್ಯಕ್ತಿಗೂ ರಾಷ್ಟ್ರೀಯ ಕಾನೂನುಸೇವೆಗಳಪ್ರಾಧಿಕಾರದಯೋಜನೆಗಳನ್ನು ತಿಳಿಸಬೇಕು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಿಂದ ದೊರೆಯುವ ಕಾನೂನು ಅರಿವು ಮತ್ತು ನೆರವಿನ ಬಗ್ಗೆ ಜನರಿಗೆ ತಿಳುವಳಿಕೆ ನೀಡಬೇಕು ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಬಿರಾದಾರ ದೇವಿಂದ್ರಪ್ಪಾ ಎನ್. ಅವರು ಹೇಳಿದರು.

ಜಿಲ್ಲಾ ನ್ಯಾಯಾಲಯ ಸಂಕೀರ್ಣದಲ್ಲಿ ಇಂದು ಜಿಲ್ಲಾ ನ್ಯಾಯಾಂಗ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ನ್ಯಾಯವಾದಿಗಳ ಸಂಘ, ಅಭಿಯೋಜನಾ ಇಲಾಖೆ ಹಾಗೂ ಬೆಂಗಳೂರು ಔಟ್‌ಲಾಡ್ ಇಂಡಿಯಾ ಫೌಂಡೇಷನ್ ಸಹಯೋಗದಲ್ಲಿ ಸೆ.23 ಹಾಗೂ 24 ರಂದು ನಡೆಯುವ ಅರೆ ನ್ಯಾಯಿಕ ಸ್ವಯಂ ಸೇವಕರ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಸಮಾಜದಲ್ಲಿನ ಜನರ ಸೇತುವೆಯಾಗಿ ತಾವುಗಳು ಕಾರ್ಯನಿರ್ವಹಿಸಬೇಕು. ಹಾಗಾಗಿ ತಾವು ಜ್ಞಾನ ಹಾಗೂ ವಿಷಯಗಳ ಸಂಗ್ರಹಣೆಗಾಗಿ ತರಬೇತಿ ಆಯೋಜಿಸಲಾಗಿದೆ. ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಹೇಳಿದರು.

ಕೌಟುಂಬಿಕ ನ್ಯಾಯಾಲಯದ ಪ್ರಧಾನ ನ್ಯಾಯಾಧೀಶರಾದ ಎಂ.ಜಿ.ಶಿವಳ್ಳಿ ಅಧ್ಯಕ್ಷತೆ ವಹಿಸಿದ್ದರು. ನ್ಯಾಯಾಧೀಶರಾದ ಶ್ರೀಮತಿ ಅಶ್ವಿನಿ ವಿಜಯ ಶಿರಿಯಣ್ಣನವರ, ಎನ್.ಎಂ.ರಮೇಶ, ಶ್ರೀಮತಿ ಶೋಭಾ ಬಿ.ಜಿ., ಶ್ರೀಮತಿ ಶ್ರೀಶೈಲಜಾ ಎಚ್.ವಿ, ಆಕರ್ಷ ಎಂ., ರಾಹುಲ್ ಆದಿನಾಥ ನ್ಯಾಮಗೌಡ, ಜಿಲ್ಲಾ ನ್ಯಾಯವಾದಿಗಳ ಸಂಘದ ಅಧ್ಯಕ್ಷ ಎಚ್.ಸಿ.ಸಿದ್ದನಗೌಡರ, ಕಾರ್ಯದರ್ಶಿ ಪಿ.ಎಸ್.ಹೆಬ್ಬಾಳ, ಔಟ್‌ಲಾಡ್ ಇಂಡಿಯಾ ಫೌಂಡೇಷನ್‌ಜೋಮಿಜೋಯ್‌ಹಾಗೂಶ್ರೀಮತಿ ಮೀಮಾನ್ಸಾಸಿಂಗ್ ಇತರರು ಉಪಸ್ಥಿತರಿದ್ದರು.

# ಪೌರಕಾರ್ಮಿಕರ ಸೇವೆ ಸಮಾಜಕ್ಕೆ ಅವಿಭಾಜ್ಯ

**ಹರಿಹರ :** ಪೌರಕಾರ್ಮಿಕರ ಸೇವೆ ಸಮಾಜಕ್ಕೆ ಅವಿಭಾಜ್ಯವಾಗಿದ್ದು, ರಸ್ತೆ ಸ್ವಚ್ಛತೆ ಹಾಗೂ ಪರಿಸರ ಸಂರಕ್ಷಣೆಯಲ್ಲಿ ಅವರು ಮಹತ್ವದ ಪಾತ್ರ ವಹಿಸುತ್ತಿದ್ದಾರೆ ಎಂದು ನಗರಸಭೆ ಪೌರಾಯುಕ್ತೆ ಈರಮ್ಮ ಎ. ಹೇಳಿದರು.

ನಗರಸಭೆ ಆವರಣದಲ್ಲಿ ಬುಧವಾರ ನಡೆದ 15ನೇ ಪೌರಕಾರ್ಮಿಕರ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಚಳಿ, ಗಾಳಿ, ಮಳೆಯನ್ನೂ ಲೆಕ್ಕಿಸದೆ ಪೌರಕಾರ್ಮಿಕರು ಸ್ವಚ್ಛತಾ ಕಾರ್ಯದಲ್ಲಿ ತೊಡಗಿಸಿಕೊಳ್ಳುವುದರಿಂದ ನಗರ ಸ್ವಚ್ಛ ಹಾಗೂ ಸುಂದರವಾಗಿ ಕಾಣಲು ಸಾಧ್ಯವಾಗುತ್ತದೆ ಎಂದರು.

ಪೌರಕಾರ್ಮಿಕರು ಕರ್ತವ್ಯ ನಿರ್ವಹಿಸುವ ಸಂದರ್ಭದಲ್ಲಿ ಸರ್ಕಾರ ಒದಗಿಸಿರುವ ಸುರಕ್ಷತಾ ಪರಿಕರಗಳನ್ನು ಕಡ್ಡಾಯವಾಗಿ ಬಳಸಬೇಕು. ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವ ಮೂಲಕ ಅವರನ್ನು ವಿದ್ಯಾವಂತರನ್ನಾಗಿ ಮಾಡಬೇಕು. ತಮ್ಮ ವೃತ್ತಿಯನ್ನೇ ಮಕ್ಕಳು ಮುಂದುವರಿಸುವ ಬದಲು ಅವರಿಗೆ ಉನ್ನತ ಶಿಕ್ಷಣ ಕೊಡಿಸಲು ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು.

ಸರ್ಕಾರದಿಂದ ಪೌರಕಾರ್ಮಿಕರಿಗೆ ದೊರೆಯಬೇಕಾದ ಸೌಲಭ್ಯಗಳು ಹಾಗೂ ಸವಲತ್ತುಗಳನ್ನು ಒದಗಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಅವರು ಭರವಸೆ ನೀಡಿದರು.

ಕರ್ನಾಟಕ ಪೌರ ಸೇವಾ ನೌಕರರ ಸಂಘದ ಜಿಲ್ಲಾ ಅಧ್ಯಕ್ಷ ರಮೇಶ್ ಹೆಚ್. ಮಾತನಾಡಿ, ಕರ್ತವ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಸ್ವಂತ




ಮನೆ ಅಥವಾ ನಿವೇಶನದ ಕೊರತೆ ಇದೆ. ಇದು ಸಂಘದ ಬಹುದಿನಗಳ ಬೇಡಿಕೆಯಾಗಿದ್ದು, ಈ ಬಗ್ಗೆ ಪೌರಾಯುಕ್ತರು ಗಮನಹರಿಸಿ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಕಚೇರಿ ವ್ಯವಸ್ಥಾಪಕಿ ಜಯಲಕ್ಷ್ಮಿ, ಹಿರಿಯ ಆರೋಗ್ಯ ನಿರೀಕ್ಷಕ ಮಂಜುನಾಥ್, ಲೆಕ್ಕ ಪರಿಶೋಧಕ ನಾಗರಾಜ ಬಿ. ಬಿಲ್ಲಾಳ, ಕಂದಾಯನಿರೀಕ್ಷಕಿಸಬ್ರಿನ್ ತಾಜ್, ಕಿರಿಯಆರೋಗ್ಯನಿರೀಕ್ಷಕವೀರೇಶ್, ಹರಿಹರ ಶಾಖೆಯ ಅಧ್ಯಕ್ಷ ಸದಾಶಿವ, ರವಿ, ಸೌಭಾಗ್ಯಮ್ಮ, ಕೊಪ್ಪಳ ಹನುಮಂತಪ್ಪ, ಹನುಮಂತಪ್ಪ ಡಿ., ಎನ್. ಹನುಮಂತಪ್ಪ ದಫೇದಾರ್, ಪಿ.ಹೆಚ್. ರಾಮಕೃಷ್ಣಪ್ಪ, ಬಿ.ಹೆಚ್. ಮರಿದೇವ, ರಾಮಕುಮಾರ್ ಕೊಂಡಜ್ಜಿ, ಜಿ.ಕೆ. ಪ್ರವೀಣ್ ಕುಮಾರ್, ಎ.ಆರ್. ತಮ್ಮಯ್ಯ, ಜಗದೀಶ ಅಡ್ಡೇರ, ಪೂಜಾ, ರೂಪ. ಸೇರಿದಂತೆ ಪೌರಕಾರ್ಮಿಕರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು

## ಜೆಡಿಎಸ್ ಪದವೀಧರ ಕ್ಷೇತ್ರ ಚುನಾವಣೆ: ಸೆ.24ರಂದು ದಾವಣಗೆರೆ ಜಿಲ್ಲಾಮಟ್ಟದ ಪೂರ್ವಭಾವಿ ಸಭೆ

**ಹರಿಹರ:** ಅಕ್ಟೋಬರ್ 23ರಂದು ನಡೆಯಲಿರುವ ಪದವೀಧರ ಕ್ಷೇತ್ರದ ಚುನಾವಣೆಗೆ ಸಂಬಂಧಿಸಿದಂತೆ ಕರ್ನಾಟಕ ಪ್ರದೇಶ ಜನತಾದಳ (ಜಾತ್ಯತೀತ) ಪಕ್ಷದ ದಾವಣಗೆರೆ



ಜಿಲ್ಲಾಮಟ್ಟದ ಪೂರ್ವಭಾವಿ ಸಭೆಯನ್ನು ಸೆಪ್ಟೆಂಬರ್ 24ರಂದು ಆಯೋಜಿಸಲಾಗಿದೆ. ಗುರುವಾರ ಮಧ್ಯಾಹ್ನ 12 ಗಂಟೆಗೆ ದೊಡ್ಡಬಾತಿಯ ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ಆವರಣದಲ್ಲಿರುವ ಶ್ರೀ ವಿನಾಯಕ ದೇವಸ್ಥಾನದಲ್ಲಿ ಸಭೆ ನಡೆಯಲಿದೆ. ಜೆಡಿಎಸ್ ಜಿಲ್ಲಾಧ್ಯಕ್ಷ ಬಿ. ಚಿದಾನಂದಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ.

ಪಕ್ಷದ ಮುಖಂಡರು, ವಿವಿಧ ಘಟಕಗಳ ಪದಾಧಿಕಾರಿಗಳು, ಕಾರ್ಯಕರ್ತರು, ಮಹಿಳೆಯರು, ಯುವಕರು ಹಾಗೂ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸಭೆಯನ್ನು ಯಶಸ್ವಿಗೊಳಿಸಬೇಕು ಎಂದು ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಮನವಿ ಮಾಡಿದ್ದಾರೆ.

SAMALOCHANE RANEBENNURSUDDI
Kannada Daily Morning

ಸಮಾಲೋಚನೆ ಸುದ್ದಿ

ಗುರುವಾರ 24 ಸೆಪ್ಟೆಂಬರ್ 2026
24 SEPTEMBER 2026



# ಕೆರೆಗಳನ್ನು ತುಂಬಿಸಿ ರೈತರ ಸಂಕಷ್ಟ ನಿವಾರಣೆಗೆ ಕ್ರಮ ಕೈಗೊಳ್ಳಲಿ: ಮಲ್ಲಿಕಾರ್ಜುನ ಬಳ್ಳಾರಿ

**ಸಮಾಲೋಚನೆ ಸುದ್ದಿ ಬ್ಯಾಡಗಿ**

ರಾಜ್ಯ ಸರಕಾರ ಜಿಲ್ಲೆಯ ಎಲ್ಲ ತಾಲೂಕುಗಳನ್ನು ಬರಪೀಡಿತ ತಾಲೂಕುಗಳೆಂದು ಘೋಷಿಸಿರುವುದು ಸ್ವಾಗತಾರ್ಹ. ಆದರೆ ಘೋಷಣೆಗೆ ಮಾತ್ರ ಸೀಮಿತವಾಗದೆ, ಕೂಡಲೇ ರೈತರ ಖಾತೆಗಳಿಗೆ ಬರ ಪರಿಹಾರ ಹಣ ಜಮಾ ಮಾಡುವ ಮೂಲಕ ಸಂಕಷ್ಟದಲ್ಲಿರುವ ರೈತರಿಗೆ ನೆರವಾಗಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಲ್ಲಿಕಾರ್ಜುನ ಬಳ್ಳಾರಿ ಆಗ್ರಹಿಸಿದರು.

ಪಟ್ಟಣದ ರೈತ ಸಂಘದ ಕರ್ಯಾಲಯದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಳೆ ಕೈಕೊಟ್ಟ ಹಿನ್ನೆಲೆಯಲ್ಲಿ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದರು. ಕೊನೆಗೂ ರೈತರ ಕೂಗು ಸರಕಾರಕ್ಕೆ ಕೇಳಿಸಿದ್ದು, ಜಿಲ್ಲೆಯನ್ನು ಬರಪೀಡಿತ ಎಂದು ಘೋಷಿ ಸಿರುವುದು ರೈತರಲ್ಲಿ ಕೊಂಚ ನಿರಾಳತೆ ಮೂಡಿಸಿದೆ. ಆದರೆ ಸರಕಾರ ಬರ ಘೋಷಣೆಯಲ್ಲಿಯೇ ನಿಲ್ಲದೆ, ವಿಳಂಬ ಮಾಡದೆ ಅರ್ಹ ರೈತರಿಗೆ ಬರ ಪರಿಹಾರ ಒದಗಿಸಬೇಕು. ಇದರಿಂದ ಸಂಕಷ್ಟದಲ್ಲಿರುವ ರೈತ ಕುಟುಂಬಗಳಿಗೆ ಕೊಂಚವಾದರೂ ಆರ್ಥಿಕ ನೆರವು ದೊರೆಯಲಿದೆ ಎಂದರು.

ನೀರಾವರಿ ಯೋಜನೆಗಳಿದ್ದರೂ ಕೆರೆಗಳು ಖಾಲಿ:ಗಂಗಣ್ಣ ಯಲಿ



ಮಾತನಾಡಿ, ಬ್ಯಾಡಗಿ ತಾಲೂಕಿನಲ್ಲಿ ಆಣೂರು, ಬುಡಪನಹಳ್ಳಿ, ಗುಡ್ಡದ ಮಲ್ಲಾಪುರ ಹಾಗೂ ಅಸುಂಡಿ ಸೇರಿದಂತೆ 4 ನೀರಾವರಿ

ಯೋಜನೆಗಳಿದ್ದರೂ ಹಲವು ಕೆರೆಗಳು ನೀರಿಲ್ಲದೆ ಖಾಲಿಯಾಗಿವೆ. ಸಾವಿರಾರು ಕೋಟಿ ರೂಪಾಯಿ ವೆಚ್ಚದಲ್ಲಿ ನೀರಾವರಿ ಯೋಜನೆಗಳನ್ನು ಕೈಗೊಂಡಿರುವುದಾದರೆ, ಅವುಗಳ ಉದ್ದೇಶ ರೈತರ ಜಮೀನುಗಳಿಗೆ ಹಾಗೂ ಕೆರೆಗಳಿಗೆ ನೀರು ಒದಗಿಸುವುದಾಗಿರಬೇಕು. ಆದರೆ ಕೆರೆಗಳಿಗೆ ಸಮರ್ಪಕವಾಗಿ ನೀರು ಹರಿಸದಿ ರುವುದು ರೈತರ ಸಂಕಷ್ಟವನ್ನು ಮತ್ತಷ್ಟು ಹೆಚ್ಚಿಸಿದೆ ಆದ್ದರಿಂದ ತಾಲೂಕಿನ ಎಲ್ಲ ಕೆರೆಗಳನ್ನು ಕೂಡಲೇ ತುಂಬಿಸುವ ನಿಟ್ಟಿನಲ್ಲಿ ಸರ ಕಾರ ಹಾಗೂ ಸಂಬಂಧಪಟ್ಟ ಇಲಾಖೆಗಳು ತುರ್ತು ಕ್ರಮ ಕೈಗೊಳ್ಳಬೇಕು. ನೀರಾವರಿ ಯೋಜನೆಗಳ ಸಮರ್ಪಕ ಬಳಕೆಯ ಮೂ ಲಕ ಬರದ ಪರಿಸ್ಥಿತಿಯಲ್ಲಿ ರೈತರಿಗೆ ನೆರವಾಗಬೇಕು ಎಂದು ಒತ್ತಾಯಿಸಿದರು.

ವರದಾ□ಬೇಡ್ತಿ ಯೋಜನೆ ಹಾವೇರಿ ಸೇರಿಸಿ:ಮೌನೇಶ ಕಮ್ಮಾರ ಮಾತನಾಡಿ, ಈಗಾಗಲೇ ವರದಾ□ಬೇಡ್ತಿ ಯೋಜನೆ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಡ್ರೋನ್ ಸರ್ವೆ ಕಾರ್ಯ ನಡೆಯುತ್ತಿದೆ. ಈ ಯೋಜನೆಯಲ್ಲಿ ಹಾವೇರಿ ಜಿಲ್ಲೆಯನ್ನು ಪರಿಗಣಿಸಿ, ಜಿಲ್ಲೆಯ ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಯೋಜನೆ ರೂಪಿಸಿದರೆ ಕೃಷಿ ಹಾಗೂ ನೀರಾವರಿ ಕ್ಷೇತ್ರಕ್ಕೆ ಹೆಚ್ಚಿನ ಪ್ರಯೋಜನವಾಗಲಿದೆ ಎಂದರು.ಈ ವೇಳೆ ಅಶೋಕ ಮತ್ತೂರ, ವಿ.ಸಿ ಹಾವೇರಿಮಠ, ಸೇರಿದಂತೆ ಹಲವು ರೈತರು ಉಪಸ್ಥಿತರಿದ್ದರು.

## ಮೋದಿ ಜನ್ಮದಿನ, ಸೇವಾ ಸಂಕಲ್ಪ ಅಭಿಯಾನದಡಿ ರಕ್ತದಾನ ಶಿಬಿರ

**ಹಾವೇರಿ:** ನಗರದ ಶ್ರೀರಾಮ ಮಂದಿರ ದೇವಸ್ಥಾನದಲ್ಲಿ ಭಾರತೀಯ ಜನತಾ ಪಾರ್ಟಿಯ ಹಾವೇರಿ ನಗರ ಮಂಡಲದ ಯುವ ಮೋರ್ಚಾ ವತಿಯಿಂದ ಪ್ರಧಾನಮಂತ್ರಿಗಳಾದ ನರೇಂದ್ರ ಮೋದಿಜಿಯವರ ಅವರ 76ನೇ ಜನ್ಮದಿನದ ಅಂಗವಾಗಿ ಜನುಮ ದಿನದ ಪ್ರಯುಕ್ತ ಸೇವಾ ಸಂಕಲ್ಪ ಅಭಿಯಾನದಡಿ ರಕ್ತದಾನ ಶಿಬಿರ ಆಯೋಜನೆ ಮಾಡಲಾಗಿತು.

ಮಾಜಿಶಾಸಕ ಶಿವರಾಜ ಸಜ್ಜನರ ಅವರು ಜ್ಯೋತಿ ಬೆಳಗುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು.ಈ ಶಿಬಿರದಲ್ಲಿ ಸುಮಾರು 34 ಜನ ಮೋದಿ ಅಭಿಮಾನಿ ಕಾರ್ಯಕರ್ತರು ರಕ್ತದಾನ ಮಾಡಿದರು.ಈ ಸಂದರ್ಭದಲ್ಲಿ ಮುಖಂಡರಾದ ಗವಿಸಿದ್ದಪ್ಪ ದ್ಯಾಮಣ್ಣವರ,ನಗರ ಮಂಡಲದ ಅಧ್ಯಕ್ಷರಾದ ಕಿರಣ ಟಿ. ಕೊಳ್ಳಿ, ಡಾ.ಸಂತೋಷ ಆಲದಕಟ್ಟಿ, ಕಿರಣ ಕೋಣನವರ, ನೀಲಪ್ಪ ಚಾವಡಿ, ನಾಗೇಂದ್ರ ಕಡಕೋಳ, ಹನುಮಂತಪ್ಪ ಬಾದಮಿನಾಯ್ಕ, ಮಂಜುನಾಥ ಮಲಗೋಡ, ಗುಡ್ಡಪ್ಪ ಭರಡಿ, ನಾಗರಾಜ ಹರಿಗೋಲ, ಮಹಾಲಿಂಗಸ್ವಾಮಿ ಹಿರೇಮಠ, ಮೃತ್ಯುಂಜಯ ಮುಷ್ಠಿ, ಅಲ್ಲಾಭಕ್ಷ ತಿಮ್ಮಾಪುರ, ವಿಜಯಕುಮಾರ ಚಿನ್ನಿಕಟ್ಟಿ, ನಿಂಗರಾಜ ಯರೇಶಿಮಿ, ಅಭಿಷೇಕ ಗುಡಗೂರ, ಆನಂದ ಕಲಾಲ, ಕುಮಾರ ಹತ್ತಿ, ಯಲ್ಲಪ್ಪ ಮಡಿವಾಳರ, ವಿವೇಕ ಇಂಗಳಗಿ, ಸದಾನಂದ ಸುರಳಿಹಳ್ಳಿ, ಗಿರೀಶ ಶೆಟ್ಟರ, ಆನಂದ ಕಪ್ಪರದ, ಸುನೀಲ ಬೇಟಗೇರಿ, ನಿಖಿಲ ಹಿರೇಮಠ, ರಘು,ರೋಹಿಣಿ ಪಾಟೀಲ, ವಿಜಯಲಕ್ಷ್ಮೀ ಹೆಗಡೆ, ಲಲಿತಾ ಗುಂಡೆನಹಳ್ಳಿ, ಉಮಾ ಚೌಕಿಮಠ, ಜಿಲ್ಲಾ ರಕ್ತನಿಧಿ ಕೇಂದ್ರದ ಸಿಬ್ಬಂದಿ, ಪಕ್ಷದ ಮುಖಂಡರು ಕಾರ್ಯಕರ್ತರು ಪಾಲ್ಗೊಂಡಿದ್ದರು.




## ಪೌರ ಕಾರ್ಮಿಕರು ಆರೋಗ್ಯದ ಕಡೆ ಗಮನನೀಡಲಿ

**ಹಾವೇರಿ:** ದಿನ ನಿತ್ಯ ಶ್ರಮವಹಿಸಿ ಕೆಲಸ ಮಾಡುವ ಪೌರ ಕಾರ್ಮಿಕರು ಹೆಚ್ಚು ಆರೋಗ್ಯದ ಕಡೆ ಗಮನ ನೀಡಬೇಕಾಗಿದೆ ಎಂದು ಜಿಲ್ಲಾ ರೋಗವಾಹಕ ಮತ್ತು ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ. ಸರಿತಾ ಅವರು ಹೇಳಿದರು.

ಇಲ್ಲಿನ ನಗರಸಭೆ ಸಭಾಂಗಣದಲ್ಲಿ ನಗರಸಭೆ ಹಾಗೂ ಆರೋಗ್ಯ ಇಲಾಖೆ ಸಹಯೋಗದೊಂದಿಗೆ ಪೌರಕಾರ್ಮಿಕರ ದಿನಾಚರಣೆ ನಿಮಿತ್ತವಾಗಿ ಪೌರ ಕಾರ್ಮಿಕರ ಆರೋಗ್ಯ ತಪಾಸಣಾ ಶಿಬಿರದ ಮುಖ್ಯ ಅತಿಥಿಗಳಾಗಿ ಆಗಮಿಸಿ ಅವರು ಮಾತನಾಡಿದರು.

ಪೌರ ಕಾರ್ಮಿಕರು ಕೈಗಳಿಗೆ ಹಾಗೂ ಕಾಲುಗಳಿಗೆ ರಕ್ಷಾ ಕವಚವನ್ನು ಹಾಕಿಕೊಂಡು ಕೆಲಸ ಮಾಡಲು ಮುಂದಾಗಬೇಕು. ರೋಗಾಣುಗಳು ತಮ್ಮ ದೇಹ ಪ್ರವೇಶ ಮಾಡದಂತೆ ಜಾಗೃತಿವಹಿಸಿರಿ ಎಂದರು.

ನಗರಸಭೆ ಪೌರಾಯುಕ್ತರಾದ ಹೆಚ್ ಕಾಂತರಾಜು ಮಾತನಾಡಿ ಆರೋಗ್ಯ ಎಲ್ಲಾ ಸಂಪತ್ತಿಗಿಂತ ಶ್ರೇಷ್ಠವಾಗಿದೆ.ನಗರದ ಸ್ವಚ್ಛತೆ ಹಾಗೂ ಸುಂದರವಾಗಲು ತಮ್ಮ ಸೇವೆ ಸ್ಮರಣೀಯವಾಗಿದೆ. ತಮ್ಮ ಆರೋಗ್ಯ ಉತ್ತಮವಾಗಿ ಇಟ್ಟುಕೊಂಡರೆ ಬದುಕು ನೆಮ್ಮದಿಯಾಗಲಿದೆ. ತಮ್ಮ ಅಪಾರ ಸೇವೆಯನ್ನು ನಾವೆಲ್ಲರೂ ಸ್ಮರಿಸುತ್ತೇವೆ ಎಂದು ಪೌರ ಕಾರ್ಮಿಕರ ದಿನಾಚರಣೆ ಶುಭ ಕೋರಿದರು.

ಈ ಸಂದರ್ಭದಲ್ಲಿ ತಾಲೂಕ ಆರೋಗ್ಯ ಅಧಿಕಾರಿಗಳಾದ ಡಾ.ಪ್ರಭಾಕರ ಕುಂದೂರ,ನಗರಸಭೆ ಹಿರಿಯ ಆರೋಗ್ಯ ನಿರೀಕ್ಷಕರಾದ ಶ್ರೀಮತಿ ರೂಪಾ ನಾಯ್ಕ,ಕಿರಿಯ ಆರೋಗ್ಯ ನಿರೀಕ್ಷಕರಾದ ರಮೇಶ ಮುಂಜೋಜಿ,ಗಿರೀಶ ಹರವಿ,ಶ್ರೀಮತಿ ತಬಸೂಮ್,ದುರಗೇಶ ತಿಮ್ಮಾಪುರ, ಅಣ್ಣಪ್ಪ ತಗಡಿನಮನಿ,ರಾಜು ಮಾಳಗಿ,ನಗರಸಭೆ ಸಿಬ್ಬಂದಿಗಳು ಆರೋಗ್ಯ ಇಲಾಖೆ ಸಿಬ್ಬಂದಿಗಳು ಹಾಗೂ ಪೌರಕಾರ್ಮಿಕರು ಪಾಲ್ಗೊಂಡಿದ್ದರು.




## ಬಂಟಿಂಗ್, ಬ್ಯಾನರ್ ಹಾಗೂ ಪೋಸ್ಟರ್ ತೆರವಿಗೆ ಡಿಸಿ ಆದೇಶ

**ಹಾವೇರಿ:** ಕರ್ನಾಟಕ ಪಶ್ಚಿಮ ಪದವೀಧರರ ಮತಕ್ಷೇತ್ರದ ಚುನಾವಣೆ ಘೋಷಣೆಯಾದ ಹಿನ್ನೆಲೆಯಲ್ಲಿ ಇಂದಿನಿಂದಲೇ ಜಿಲ್ಲೆಯಾದ್ಯಂತ ಮಾದರಿ ನೀತಿ ಸಂಹಿತೆ ಜಾರಿಯಲ್ಲಿದೆ. ನಗರ ಸ್ಥಳೀಯ ಸಂಸ್ಥೆಗಳಲ್ಲಿ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ರಾಜಕೀಯ ಪಕ್ಷಗಳ ಮುಖಂಡರ ಭಾವಚಿತ್ರವಿರುವ ಬಂಟಿಂಗ್, ಬ್ಯಾನರ್, ಪೋಸ್ಟರ್ ತೆರವುಗೊಳಿಸಿ, ಗೋಡೆಬರಹ ಮುಚ್ಚಿಡುವ ಕಾರ್ಯವನ್ನು 24 ಗಂಟೆಯೊಳಗೆ ಕೈಗೊಂಡು ಜಿಲ್ಲಾಡಳಿತಕ್ಕೆ ವರದಿ ನೀಡುವಂತೆ ತಹಶೀಲ್ದಾರ, ಪೌರಾಯುಕ್ತರು, ತಾ.ಪಂ.ಕಾರ್ಯನಿರ್ವಾಹಕರಿಗಳಿಗೆ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಅವರು ಆದೇಶ ಹೊರಡಿಸಿದ್ದಾರೆ.

### ಜಿಲ್ಲೆಯಾದ್ಯಂತ ನೀತಿ ಸಂಹಿತೆ ಜಾರಿ: ಜಿಲ್ಲಾಧಿಕಾರಿ ವಿಜಯಮಹಾಂತೇಶ

**ಹಾವೇರಿ:** ಭಾರತ ಚುನಾವಣಾ ಆಯೋಗ ಕರ್ನಾಟಕ ಪಶ್ಚಿಮ ಪದವೀಧರರ ಮತಕ್ಷೇತ್ರದ ಚುನಾವಣೆ ವೇಳಾಪಟ್ಟಿ ಪ್ರಕಟಿಸಿದ್ದು, ಜಿಲ್ಲೆಯಾದ್ಯಂತ ಇಂದಿನಿಂದಲೇ ಮಾದರಿ ನೀತಿ ಸಂಹಿತೆ ಜಾರಿಯಲ್ಲಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಅವರು ತಿಳಿಸಿದ್ದಾರೆ.

ದಿ.29-09-2026ರಂದು ಮಂಗಳವಾರ ಅಧಿಸೂಚನೆ ಹೊರಡಿಸಲಾಗುವುದು, ನಾಮಪತ್ರ ಸಲ್ಲಿಕೆಗೆ ದಿನಾಂಕ 06-10-2026 ಕೊನೆಯ ದಿನ, ದಿನಾಂಕ 07-10-2026 ರಂದು ನಾಮಪತ್ರಗಳ ಪರಿಶೀಲನೆ , ದಿನಾಂಕ 09-10-2026 ರಂದು ಉಮೇದುವಾರಿಕೆ ಹಿಂಪಡೆಯಲು ಕೊನೆಯ ದಿನವಾಗಿದೆ. ದಿನಾಂಕ 23-10-2027ರಂದು ಬೆಳಿಗ್ಗೆ 8 ಗಂಟೆಯಿಂದ ಸಾಯಂಕಾಲ 4 ಗಂಟೆವರೆಗೆ ಮತದಾನ ನಡೆಯಲಿದ್ದು, ದಿನಾಂಕ 27-010-2026 ರಂದು ಮತ ಎಣಿಕೆ ಜರುಗಲಿದೆ. ದಿನಾಂಕ 31-10-2026 ರಂದು ಚುನಾವಣೆ ಪ್ರಕ್ರಿಯೆ ಪೂರ್ಣಗೊಳ್ಳಲಿದೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪಾರದರ್ಶಕ ಚುನಾವಣೆಗೆ ಅಗತ್ಯ ಸಿದ್ಧತೆ

**ಹಾವೇರಿ:** ಭಾರತ ಚುನಾವಣಾ ಆಯೋಗ ಕರ್ನಾಟಕ ಪಶ್ಚಿಮ ಪದವೀಧರರ ಮತಕ್ಷೇತ್ರದ ಚುನಾವಣೆ ವೇಳಾಪಟ್ಟಿ ಪ್ರಕಟಿಸಿದ್ದು, ಜಿಲ್ಲೆಯಾದ್ಯಂತ ಸೆ.22 ರಿಂದ ಮಾದರಿ ನೀತಿ ಸಂಹಿತೆ ಜಾರಿಯಲ್ಲಿದೆ. ಪಾರದರ್ಶಕ ಚುನಾವಣೆಗೆ ಜಿಲ್ಲಾಡಳಿತ ಅಗತ್ಯ ಸಿದ್ಧತೆಯನ್ನು ಕೈಗೊಂಡಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಅವರು ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಕೋರ್ಟ ಹಾಲ್‌ನಲ್ಲಿ ಬುಧವಾರ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಮುಖಂಡರ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಹಾವೇರಿ, ಗದಗ, ಉತ್ತರ ಕನ್ನಡ ಹಾಗೂ ಧಾರವಾಡ ಜಿಲ್ಲೆಗಳನ್ನು ಒಳಗೊಂಡಿರುವ ಕರ್ನಾಟಕ ಪಶ್ಚಿಮ ಪದವೀಧರ ಕ್ಷೇತ್ರದ ಚುನಾವಣಾ ಅಧಿಕಾರಿಯಾಗಿ ಬೆಳಗಾವಿ ವಿಭಾಗದ ಪ್ರಾದೇಶಿಕ ಆಯುಕ್ತರು ಕಾರ್ಯನಿರ್ವಹಿಸಲಿದ್ದಾರೆ. ಸಹಾಯಕ ಚುನಾವಣಾಧಿಕಾರಿಗಳಾಗಿ ನಾಲ್ಕು ಜಿಲ್ಲೆಗಳ ಜಿಲ್ಲಾಧಿಕಾರಿಗಳು ಕಾರ್ಯನಿರ್ವಹಿಸಲಿದ್ದಾರೆ ಎಂದರು.

ನಗರ ಸ್ಥಳೀಯ ಸಂಸ್ಥೆಗಳಲ್ಲಿ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ರಾಜಕೀಯ ಪಕ್ಷಗಳ ಮುಖಂಡರ ಭಾವಚಿತ್ರವಿರುವ ಬಂಟಿಂಗ್, ಬ್ಯಾನರ್, ಪೋಸ್ಟರ್ ತೆರವುಗೊಳಿಸಲು ಆದೇಶ ಹೊರಡಿಸಲಾಗಿದೆ. ಮುಂಬರುವ ದಿನಗಳಲ್ಲಿ ಪಕ್ಷ ಅಥವಾ ಅಭ್ಯರ್ಥಿಯಿಂದ ಆಯೋಜಿಸುವ ಸಭೆ-ಸಮಾರಂಭಗಳಿಗೆ, ಬಂಟಿಂಗ್, ಬ್ಯಾನರ್, ಪೋಸ್ಟರ್ ಅಳವಡಿಕೆಗೆ ಸ್ಥಳೀಯ ನಗರಸಂಸ್ಥೆಗಳಿಂದ ಅನುಮತಿ ಪಡೆದುಕೊಳ್ಳಬೇಕು ಹಾಗೂ ಮಾದರಿ ನೀತಿ ಸಂಹಿತೆ ಪಾಲಿಸಬೇಕು ಎಂದು ತಿಳಿಸಿದರು.

ಚುನಾವಣಾ ವೇಳಾ ಪಟ್ಟಿ:

ದಿ.29-09-2026ರಂದು ಮಂಗಳವಾರ ಅಧಿಸೂಚನೆ ಹೊರಡಿಸಲಾಗುವುದು, ನಾಮಪತ್ರ ಸಲ್ಲಿಕೆಗೆ ದಿನಾಂಕ 06-10-2026 ಕೊನೆಯ ದಿನ, ದಿನಾಂಕ 07-10-2026 ರಂದು ನಾಮಪತ್ರಗಳ ಪರಿಶೀಲನೆ , ದಿನಾಂಕ 09-10-2026 ರಂದು ಉಮೇದುವಾರಿಕೆ ಹಿಂಪಡೆಯಲು ಕೊನೆಯ ದಿನವಾಗಿದೆ. ದಿನಾಂಕ 23-10-2026ರಂದು ಬೆಳಿಗ್ಗೆ 8 ಗಂಟೆಯಿಂದ ಸಾಯಂಕಾಲ 4 ಗಂಟೆವರೆಗೆ ಮತದಾನ ನಡೆಯಲಿದ್ದು, ದಿನಾಂಕ 27-10-2026



ರಂದು ಮತ ಎಣಿಕೆ ಜರುಗಲಿದೆ. ದಿನಾಂಕ 31-10-2026 ರಂದು ಚುನಾವಣೆ ಪ್ರಕ್ರಿಯೆ ಪೂರ್ಣಗೊಳ್ಳಲಿದೆ ಎಂದು ತಿಳಿಸಿದರು.

ಜಿಲ್ಲೆಯಲ್ಲಿ ದಿ.30-12-2025ರ ಅಂತಿಮ ಮತದಾರರ ಪಟ್ಟಿ ಅನುಸಾರ 13,951 ಪುರುಷ, 8,209 ಮಹಿಳಾ ಮತದಾರರು ಸೇರಿ 22,160 ಮತದಾರರಿದ್ದಾರೆ. ಹಾನಗಲ್ ತಾಲೂಕಿನಲ್ಲಿ 1966 ಪುರುಷ ಹಾಗೂ 977 ಮಹಿಳೆಯರು ಸೇರಿ 2,943, ಶಿಗ್ಗಾಂವ ತಾಲೂಕಿನಲ್ಲಿ 1343 ಪುರುಷ ಹಾಗೂ 775 ಮಹಿಳೆಯರು ಸೇರಿ 2,118, ಸವಣೂರ ತಾಲೂಕಿನಲ್ಲಿ 1271 ಪುರುಷ ಹಾಗೂ 583 ಮಹಿಳೆಯರು ಸೇರಿ 1854, ಹಾವೇರಿ ತಾಲೂಕಿನಲ್ಲಿ 2594 ಪುರುಷ ಹಾಗೂ 1606 ಮಹಿಳೆಯರು ಸೇರಿ 4,200, ಬ್ಯಾಡಗಿ ತಾಲೂಕಿನಲ್ಲಿ 1263 ಪುರುಷ ಹಾಗೂ 725 ಮಹಿಳೆಯರು ಸೇರಿ 1988, ಹಿರೇಕೆರೂರು ತಾಲೂಕಿನಲ್ಲಿ 1323 ಪುರುಷ ಹಾಗೂ 693 ಮಹಿಳೆಯರು ಸೇರಿ 2,016, ರಟ್ಟಿಹಳ್ಳಿ ತಾಲೂಕಿನಲ್ಲಿ 849 ಪುರುಷ ಹಾಗೂ 452 ಮಹಿಳೆಯರು ಸೇರಿ 1301 ಹಾಗೂ ರಾಣೇಬೆನ್ನೂರು ತಾಲೂಕಿನಲ್ಲಿ 3342 ಪುರುಷ ಹಾಗೂ 2398 ಮಹಿಳೆಯರು ಸೇರಿ 5740 ಮತದಾರರಿದ್ದಾರೆ. ದಿ.31-12-2025 ರಿಂದ 23-09-2026ರವರೆಗೆ ನಮೂನೆ -18ರಲ್ಲಿ 603 ಹೊಸ ಅರ್ಜಿ ಹಾಗೂ ನಮೂನೆ -7ರಲ್ಲಿ 20 ಆಕ್ಷೇಪಣೆ ಇತರೆ ಅರ್ಜಿಗಳು ಬಂದಿವೆ ಎಂದು ತಿಳಿಸಿದರು.

ಕಳೆದ ಚುನಾವಣೆಯಲ್ಲಿ ಜಿಲ್ಲೆಯಲ್ಲಿ 23 ಸಾವಿರಕ್ಕೂ ಅಧಿಕ ಮತದಾರರಿದ್ದರು. ಪ್ರಸ್ತುತ ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪದವಿಧರರಿದ್ದು, ಸೆ.26ರವರೆಗೆ ಹೊಸ ಮತದಾರರ ಅರ್ಜಿ ಸಲ್ಲಿಕೆಗೆ ಅವಕಾಶವಿದ್ದು, ಪದವಿಧರರು ಹೆಚ್ಚಿನ ಸಂಖ್ಯೆಯಲ್ಲಿ ನಿಗದಿತ ದಿನಾಂಕದೊಳಗಾಗಿ ತಹಶೀಲ್ದಾರ ಕಚೇರಿಗೆ ಅರ್ಜಿ ನಮೂನೆ ಸಲ್ಲಿಸುವ ಮೂಲಕ ಮತದಾರರ ಪಟ್ಟಿಗೆ ಸೇರ್ಪಡೆಯಾಗಬೇಕು ಎಂದರು.

30 ಮತಗಟ್ಟೆ: ಸವಣೂರ, ಬ್ಯಾಡಗಿ, ಹಿರೇಕೆರೂರು, ರಟ್ಟಿಹಳ್ಳಿ ತಾಲೂಕಿನಲ್ಲಿ ತಲಾ ಎರಡು, ಶಿಗ್ಗಾಂವ-03, ಹಾನಗಲ್-04, ಹಾವೇರಿ-05, ರಾಣೇಬೆನ್ನೂರು -08 ಸೇರಿ 28 ಮತಗಟ್ಟೆ ಹಾಗೂ 1200ಕ್ಕಿಂತ ಅಧಿಕ ಮತದಾರರಿರುವ ಮತಗಟ್ಟೆಗಳಲ್ಲಿ ಹೆಚ್ಚುವರಿ ಮತಗಟ್ಟೆ ಸ್ಥಾಪಿಸಲಾಗುತ್ತಿದ್ದು, ಬ್ಯಾಡಗಿ ಹಾಗೂ ಹಿರೇಕೆರೂರು ತಾಲೂಕಿನಲ್ಲಿ ತಲಾ ಒಂದು ಹೆಚ್ಚುವರಿ ಮತಗಟ್ಟೆ ಸೇರಿ 30 ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಡಾ.ನಾಗರಾಜ ಎಲ್., ಚುನಾವಣಾ ತಹಶೀಲ್ದಾರ ಅಮೃತಗೌಡ ಪಾಟೀಲ, ಡಿಡಿಪಿಯು, ವಿವಿಧ ರಾಜಕೀಯ ಪಕ್ಷದ ಮುಖಂಡರು ಉಪಸ್ಥಿತರಿದ್ದರು.

## ಗಾಂಧಿ ಜಯಂತಿ ಸಾಮೂಹಿಕ ಶ್ರಮದಾನ ಕಾರ್ಯಕ್ರಮ

**ಹಾವೇರಿ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ವಿವಿಧ ಇಲಾಖೆಗಳ ಸಹಯೋಗದಲ್ಲಿ ಗಾಂಧಿ ಜಯಂತಿ ಅಂಗವಾಗಿ ಸಾಮೂಹಿಕ ಶ್ರಮದಾನ ಕಾರ್ಯಕ್ರಮವನ್ನು ಸೆ.29 ರಂದು ಕಚೇರಿಗಳ ಆವರಣ ಹಾಗೂ ಸೆ.30 ರಂದು ಹಾವೇರಿ ನಗರದ ವಿವಿಧ ಸ್ಥಳಗಳಲ್ಲಿ ಹಮ್ಮಿಕೊಳ್ಳಲಾಗಿದೆ.

ಸೆ.29 ರಂದು ಜಿಲ್ಲಾಡಳಿತ ಭವನದ ಎ.ಬಿ. ಹಾಗೂ ಸಿ ಬ್ಲಾಕ್‌ಗಳಲ್ಲಿ ಹಾಗೂ ಜಿಲ್ಲಾ ಪಂಚಾಯತ್ ಕಟ್ಟಡದ ಆವರಣದ ಸ್ವಚ್ಛತೆ ಕಾರ್ಯದಲ್ಲಿ ಜಿಲ್ಲಾಡಳಿತ ಭವದಲ್ಲಿರುವ ಎಲ್ಲ ಕಚೇರಿಗಳ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಶ್ರಮದಾನ ಮಾಡಲಿದ್ದಾರೆ.

ಸೆ.30 ರಂದು ಬೆಳಿಗ್ಗೆ 7 ಗಂಟೆಯಿಂದ 10 ಗಂಟೆವರೆಗೆ ನಗರದಲ್ಲಿ ಸಾಮೂಹಿಕ ಶ್ರಮದಾನ ಆಯೋಜಿಸಲಾಗಿದೆ.

ಇಜಾರಿಲಕಮಾಪೂರ ಶ್ರೀ ದುಂಡಿಬಸವೇಶ್ವರ ದೇವಸ್ಥಾನದಿಂದ ಜೆ.ಎಚ್.ಪಟೇಲ್ ವೃತ್ತದವರೆಗೆ ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್, ಪಂಚಾಯತ್ ರಾಜ್ ಹಾಗೂ ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗದ ಮುಖ್ಯಸ್ಥರು ಹಾಗೂ ಎಲ್ಲ ಸಿಬ್ಬಂದಿಗಳು, ಜೆ.ಎಚ್.ಪಟೇಲ್ ವೃತ್ತದಿಂದ ವಿ.ಕೃ.ಗೋಕಾಕ (ಗುರುಭವನ)ವೃತ್ತವರೆಗೆ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಶ್ರಮದಾನದಲ್ಲಿ ಭಾಗವಹಿಸಲಿದ್ದಾರೆ.

ಜೆ.ಎಚ್.ಪಟೇಲ್ ವೃತ್ತದಿಂದ ಶ್ರೀ ಬಸವೇಶ್ವರ ವೃತ್ತದವರೆಗೆ ಪರಿಸರ ಹಾಗೂ ಮಾಲಿನ್ಯ ನಿಯಂತ್ರಣ ಇಲಾಖೆ, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು, ಶ್ರೀ ಬಸವೇಶ್ವರ ವೃತ್ತದಿಂದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದವರೆಗೆ ಜಿಲ್ಲಾ ಮತ್ತು ತಾಲೂಕು ಮಟ್ಟದ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು, ನಗರದ ಹಾಸ್ಟೆಲ್ ವಾರ್ಡ್‌ನ್‌ಗಳು, ಕಾರ್ಮಿಕ ಇಲಾಖೆ, ನೋಂದಣಿ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಶ್ರಮದಾನದಲ್ಲಿ ಭಾಗವಹಿಸಲಿದ್ದಾರೆ.

ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಿಂದ ಗಾಂಧಿ ಭವನದ ಮಾರ್ಗವಾಗಿ ಗುತ್ತಲ ರಸ್ತೆಯ ಅಂಡರ್ ಬ್ರಿಡ್ಜ್‌ವರೆಗೆ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು, ಸಿಬ್ಬಂದಿಗಳು, ಹಾಸ್ಟೇಲ್ ವಾರ್ಡ್‌ನ್‌ಗಳು, ಹೆಸ್ಕಾಂ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಹಾಗೂ ವಿ.ಕೃ.ಗೋಕಾಕ ವೃತ್ತದಿಂದ ಜೆಪಿ ವೃತ್ತದವರೆಗೆ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಧಿಕಾರಿಗಳು, ವಸತಿ ನಿಲಯಗಳ ವಾರ್ಡ್‌ನಗಳು, ಪ್ರಾದೇಶಿಕ ಸಾರಿಗೆ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು, ಜೆ.ಪಿ.ವೃತ್ತದಿಂದ ಮಹಾತ್ಮಗಾಂಧಿ ವೃತ್ತದವರೆಗೆ ಡಾ.ಬಿ.ಆರ್. ಅಂಬೇಡ್ಕರ ನಿಗಮ ಸೇರಿದಂತೆ ಎಲ್ಲ ನಿಗಮಗಳ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಶ್ರಮದಾನದಲ್ಲಿ ಭಾಗವಹಿಸಲಿದ್ದಾರೆ.

ಗಾಂಧಿ ವೃತ್ತದಿಂದ ಎಂ.ಜಿ.ರಸ್ತೆ ಮಾರ್ಗವಾಗಿ ಹುಕ್ಕೇರಿಮಠದವರೆಗೆ ಕೃಷಿ ಹಾಗೂ ರೇಷ್ಮೆ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು, ಗಾಂಧಿ ವೃತ್ತದಿಂದ ಮೈಲಾರ ಮಹದೇವಪ್ಪ ವೃತ್ತದವರೆಗೆ ತೋಟಗಾರಿಕೆ ಹಾಗೂ ಮೀನುಗಾರಿಕೆ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು, ಜೆ.ಪಿ.ವೃತ್ತದಿಂದ ಮಾರುಕಟ್ಟೆ ಮಾರ್ಗವಾಗಿ ಹೊಸಮನಿ ಸಿದ್ದಪ್ಪ ವೃತ್ತದವರೆಗೆ ನಗರಾಭಿವೃದ್ಧಿ ಪ್ರಾಧಿಕಾರ, ನಗರಸಭೆ, ಉದ್ಯೋಗ ವಿನಿಮಯ ಹಾಗೂ ಪಶು ಪಾಲನೆ ಇಲಾಖೆ ಅಧಿಕಾರಿಗಳು ಸಿಬ್ಬಂದಿಗಳು ಶ್ರಮದಾನದಲ್ಲಿ ಭಾಗವಹಿಸಲಿದ್ದಾರೆ.

ಹೊಸಮನಿ ಸಿದ್ದಪ್ಪ ವೃತ್ತದಿಂದ ಸಂಗೂರ ಕರಿಯಪ್ಪ ವೃತ್ತದವರೆಗೆ ಆರೋಗ್ಯ ಇಲಾಖೆ, ಜಿಲ್ಲಾ ಆಸ್ಪತ್ರೆ, ಆಯುಷ್ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು, ರೆಡ್ ಕ್ರಾಸ್, ನರ್ಸಿಂಗ್ ಕಾಲೇಜ್ ಪ್ರಾಚಾರ್ಯರು ಹಾಗೂ ವಿದ್ಯಾರ್ಥಿಗಳು, ಸಂಗೂರ ಕರಿಯಪ್ಪ ವೃತ್ತದಿಂದ ಪುರಸಿದ್ದೇಶ್ವರ ದೇವಸ್ಥಾನದವರೆಗೆ ಶಾಲಾ ಶಿಕ್ಷಣ ಇಲಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ, ಹೆಸ್ಕಾಂ ಅಧಿಕಾರಿಗಳು, ಶಾಲಾ-ಕಾಲೇಜುಗಳ ಶಿಕ್ಷಕರು, ಉಪನ್ಯಾಸಕರು, ಹೊಸಮನಿ ಸಿದ್ದಪ್ಪ ವೃತ್ತದಿಂದ ಹಾನಗಲ್ ರಸ್ತೆ ಎಪಿಎಂಸಿ ವರೆಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿ, ನಗರ ಹಾಗೂ ಗ್ರಾಮೀಣ ಠಾಣೆ, ಜಿಲ್ಲಾ ಅಂಕಿ-ಸಂಖ್ಯೆ, ಭೂ ದಾಖಲೆ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಶ್ರಮದಾನದಲ್ಲಿ ಭಾಗವಹಿಸಲಿದ್ದಾರೆ.

ಹೊಸಮನಿ ಸಿದ್ದಪ್ಪ ವೃತ್ತದಿಂದ ಕಿತ್ತೂರ ಚನ್ನಮ್ಮ ವೃತ್ತದವರೆಗೆ (ಶಹರ ಪೊಲೀಸ್ ಠಾಣೆ) ಜಿಲ್ಲಾಧಿಕಾರಿಗಳ ಕಚೇರಿ, ಉಪ ವಿಭಾಗಾಧಿಕಾರಿಗಳ ಕಚೇರಿ, ತಹಶೀಲ್ದಾರ ಕಚೇರಿ, ಉಪ ಅರಣ್ಯ ಇಲಾಖೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಮತ್ತು ಮುದ್ರಣ ಹಾಗೂ ವಿದ್ಯಾನ್ಮಾನ ಜಿಲ್ಲಾ ಮಟ್ಟದ ಪ್ರತಿನಿಧಿಗಳು ಶ್ರಮದಾನದಲ್ಲಿ ಭಾಗವಹಿಸಲಿದ್ದಾರೆ. ಕಿತ್ತೂರ ಚನ್ನಮ್ಮ ವೃತ್ತದಿಂದ ಮಹರ್ಷಿ ವಾಲ್ಮೀಕಿ ವೃತ್ತದವರೆಗೆ ಅಬಕಾರಿ ಇಲಾಖೆ, ಅಗ್ನಿಶಾಮಕ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು, ಜಿಲ್ಲಾ ಸಮಾದೇಷ್ಟರು, ಹೋಂ ಗಾರ್ಡ್ಸ್, ಸ್ಕೌಟ್ ಆಂಡ್ ಗೈಡ್ಸ್‌ನವರು ಶ್ರಮದಾನದಲ್ಲಿ ಭಾಗವಹಿಸಲಿದ್ದಾರೆ. ಬಾಲಭವನದ ಉದ್ಯಾನವನದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿ, ಮಕ್ಕಳ ರಕ್ಷಣಾ ಘಟಕದದ ಅಧಿಕಾರಿಗಳು ಹಾಗೂ ಸಿಬ್ಬಂದಿಗಳುಶ್ರಮದಾನದಲ್ಲಿ ಭಾಗವಹಿಸಲಿದ್ದಾರೆ.

### ಸರ್ಕಾರಿ ನಿರೀಕ್ಷಣಾ ಮಂದಿರ-ಪ್ರವಾಸಿ ಮಂದಿರ ವಶಕ್ಕೆ ಪಡೆಯಲು ಆದೇಶ

**ಹಾವೇರಿ: ಕರ್ನಾಟಕ ಪಶ್ಚಿಮ ಪದವೀಧರರ ಮತಕ್ಷೇತ್ರದ ಚುನಾವಣೆ ಘೋಷಣೆಯಾದ ಹಿನ್ನೆಲೆಯಲ್ಲಿ ಸೆ.22 ಜಿಲ್ಲೆಯಾದ್ಯಂತ ಮಾದರಿ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಆಯಾ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಎಲ್ಲ ಇಲಾಖೆಗಳ ಸರ್ಕಾರಿ ನಿರೀಕ್ಷಣಾ ಮಂದಿರ ಹಾಗೂ ಪ್ರವಾಸಿ ಮಂದಿರಗಳನ್ನು ಕೂಡಲೇ ವಶಕ್ಕೆ ಪಡೆಯಲು ಜಿಲ್ಲೆಯ ಎಲ್ಲ ತಹಶೀಲ್ದಾರಗಳಿಗೆ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಅವರು ಆದೇಶ ಹೊರಡಿಸಿದ್ದಾರೆ.**

### ಸರ್ಕಾರಿ ವಾಹನ ವಶಕ್ಕೆ ಪಡೆಯಲು ಆದೇಶ

ಹಾವೇರಿ: ಕರ್ನಾಟಕ ಪಶ್ಚಿಮ ಪದವೀಧರರ ಮತಕ್ಷೇತ್ರದ ಚುನಾವಣೆ ಘೋಷಣೆಯಾದ ಹಿನ್ನೆಲೆಯಲ್ಲಿ ಸೆ.22 ಜಿಲ್ಲೆಯಾದ್ಯಂತ ಮಾದರಿ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ, ಆಯಾ ತಾಲೂಕಿನ ವ್ಯಾಪ್ತಿಯಲ್ಲಿ ಅಧಿಕಾರೇತರಿಗೆ ನೀಡಿರುವ ಸರ್ಕಾರಿ ವಾಹನಗಳನ್ನು ಹಾಗೂ ಇನ್ನಿತರೆ ನಿಗಮ, ಮಂಡಳಿ , ಸರ್ಕಾರಿ ಸಂಸ್ಥೆಗಳು, ಅಧ್ಯಕ್ಷರು ಹಾಗೂ ಉಪಾಧ್ಯಕ್ಷರಿಗೆ ಸರ್ಕಾರಿ ವಾಹನಗಳನ್ನು ನೀಡಿದಲ್ಲಿ ಸಂಬಂಧಪಟ್ಟ ತಹಶೀಲ್ದಾರಗಳು ತಮ್ಮ ತಮ್ಮ ತಾಬಾಕ್ಕೆ ತೆಗೆದುಕೊಂಡು ವರದಿ ನೀಡಲು ಜಿಲ್ಲೆಯ ಎಲ್ಲ ತಹಶೀಲ್ದಾರಗಳಿಗೆ, ಸ್ಥಳೀಯ ನಗರ ಸಂಸ್ಥೆಗಳ ಮುಖ್ಯಸ್ಥರಿಗೆ ಸಂಬಂಧಿಸಿದ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಅವರು ಆದೇಶ ಹೊರಡಿಸಿದ್ದಾರೆ.

ಸಮಾಲೋಚನೆ ಸುದ್ದಿ
SAMALOCHANE RANEBENNURSUDDI
Kannada Daily Morning

# ಪುರಾಣ-ಪುಣ್ಯಕಥೆಗಳು ಸುಳ್ಳಲ್ಲ; ಅವು ಮಾನವನ ಒಳಿತಿಗೆ ಬಿತ್ತಿದ ಸತ್ಯದ ಬೀಜಗಳು

ಇಂದಿನ ವಿಜ್ಞಾನ ಮತ್ತು ತಂತ್ರಜ್ಞಾನದ ಯುಗದಲ್ಲಿ ಪುರಾಣ, ಪುಣ್ಯಕಥೆಗಳ ಬಗ್ಗೆ ಮಾತನಾಡಿದರೆ ಕೆಲವರು ತಕ್ಷಣವೇ ಒಂದು ಪ್ರಶ್ನೆ ಕೇಳುತ್ತಾರೆ "ಇವೆಲ್ಲ ನಿಜವೇ? ಇಂತಹ ಘಟನೆಗಳು ನಿಜವಾಗಿಯೂ ನಡೆದಿವೆಯೇ?" ಎಂಬುದು. ಪ್ರಶ್ನೆ ಸಹಜ. ಪ್ರಶ್ನಿಸುವ ಮನಸ್ಸು ವಿಜ್ಞಾನದ ಲಕ್ಷಣವೂ ಹೌದು. ಆದರೆ ಒಂದು ಕಥೆಯ ಮೌಲ್ಯವನ್ನು ಅದು ಅಕ್ಷರಶಃ ಇತಿಹಾಸದಲ್ಲಿ ನಡೆದಿದೆಯೇ ಇಲ್ಲವೇ ಎಂಬ ಒಂದೇ ಮಾನದಂಡದಿಂದ ಅಳೆಯುವುದು ಎಷ್ಟು ಸಮಂಜಸ? ಸಾವಿರಾರು ವರ್ಷಗಳಿಂದ ತಲೆಮಾರಿನಿಂದ ತಲೆಮಾರಿಗೆ ಬಂದಿರುವ ಪುರಾಣ, ಪುಣ್ಯಕಥೆಗಳನ್ನು ಕೇವಲ "ಸುಳ್ಳು ಕಥೆಗಳು" ಎಂದು ತಳ್ಳಿಹಾಕುವುದು ಅವುಗಳ ಸಾಮಾಜಿಕ, ನೈತಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ಅರ್ಥಮಾಡಿಕೊಳ್ಳದಿರುವುದೇ ಆಗುತ್ತದೆ. ಏಕೆಂದರೆ ಅವು ಕೇವಲ ಕಥೆಗಳಲ್ಲ; ಅವುಗಳೊಳಗೆ ಮನುಷ್ಯನ ಬದುಕನ್ನು ಹೇಗೆ ರೂಪಿಸಬೇಕು ಎಂಬ ಪ್ರಶ್ನೆಗೆ ಅನೇಕ ರೀತಿಯ ಉತ್ತರಗಳು ಅಡಗಿವೆ. ಪುರಾಣ ಎಂದರೆ ಕೇವಲ ದೇವರು, ರಾಕ್ಷಸ, ಅದ್ಭುತಗಳು ಮತ್ತು ಅತಿಮಾನುಷ ಘಟನೆಗಳ ಸರಮಾಲೆ ಎಂದು ಭಾವಿಸುವುದು ಅದರ ವ್ಯಾಪ್ತಿಯನ್ನು ಕುಗ್ಗಿಸುವಂತಾಗಿದೆ. ಪುರಾಣಗಳು ಒಂದು ಕಾಲಘಟ್ಟದ ಸಮಾಜದ ಕಲ್ಪನೆ, ನಂಬಿಕೆ, ನೈತಿ-ಕತೆ, ಜೀವನದರ್ಶನ ಮತ್ತು ಮೌಲ್ಯಗಳನ್ನು ಕಥಾರೂಪದಲ್ಲಿ ಜನರಿಗೆ ತಲುಪಿಸಿದ ಮಾಧ್ಯಮಗಳಾಗಿವೆ. ಇಂದಿನಂತೆ ಪ್ರತಿಯೊಬ್ಬರ ಕೈಯಲ್ಲೂ ಪುಸ್ತಕ, ಮೊಬೈಲ್, ಇಂಟರ್ನೆಟ್, ದೂರದರ್ಶನ ಅಥವಾ ಸಾಮಾಜಿಕ ಮಾಧ್ಯಮ ಇರಲಿಲ್ಲ. ಅಕ್ಷರಜ್ಞಾನವೂ ಸೀಮಿತವಾಗಿದ್ದ ಕಾಲದಲ್ಲಿ ಸಂಕೀರ್ಣವಾದ ಜೀವನಸತ್ಯಗಳನ್ನು ಜನಸಾಮಾನ್ಯರಿಗೆ ತಲುಪಿಸಲು ಕಥೆ ಅತ್ಯಂತ ಪರಿಣಾಮಕಾರಿ ಸಾಧನವಾಗಿತ್ತು. ಆದ್ದರಿಂದ ಕಥೆಯೊಳಗಿನ ಪ್ರತಿಯೊಂದು ಅಂಶವನ್ನು ಪ್ರಯೋಗಾಲಯದಲ್ಲಿ ಪರೀಕ್ಷಿಸುವುದಕ್ಕಿಂತ ಅದರ ಒಳಾರ್ಥವನ್ನು ಅರಿಯುವುದು ಮುಖ್ಯ. ಪುರಾಣಗಳಲ್ಲಿನ ಅನೇಕ ಕಥೆಗಳು ಮನುಷ್ಯನ ಒಳಗಿನ ಒಳ್ಳೆಯದು ಮತ್ತು ಕೆಟ್ಟದ್ದಿನ ಸಂಘರ್ಷವನ್ನು ಚಿತ್ರಿಸುತ್ತವೆ. ಸತ್ಯದ ಪರ ನಿಲ್ಲುವ ವ್ಯಕ್ತಿ, ಲೋಭದಿಂದ ಪತನಗೊಳ್ಳುವ ವ್ಯಕ್ತಿ, ಅಹಂಕಾರದಿಂದ ನಾಶವಾಗುವ ವ್ಯಕ್ತಿ, ತ್ಯಾಗದಿಂದ ಗೌರವ ಪಡೆಯುವ ವ್ಯಕ್ತಿ, ಕರುಣೆಯಿಂದ ಮಹತ್ವ ಪಡೆಯುವ ವ್ಯಕ್ತಿ ಇಂತಹ ಪಾತ್ರಗಳ ಮೂಲಕ ಮನುಷ್ಯನ ಗುಣ ದೋಷಗಳನ್ನು ಸಮಾಜದ ಮುಂದೆ ಇಡಲಾಗಿದೆ. ಇವು ಕೇವಲ ಹಳೆಯ ಕಾಲದ ಪಾತ್ರಗಳಲ್ಲ. ಇಂದಿನ ಮನುಷ್ಯನಲ್ಲಿಯೂ ಅದೇ ಅಹಂಕಾರವಿದೆ, ಅದೇ ಲೋಭವಿದೆ, ಅದೇ ಮೋಹವಿದೆ, ಅದೇ ಕೋಪವಿದೆ. ಬದಲಾದದ್ದು ಕಾಲ ಮತ್ತು ತಂತ್ರಜ್ಞಾನ; ಮನುಷ್ಯನ ಮನಸ್ಸಿನ ಮೂಲಭೂತ ಸಂಘರ್ಷಗಳು ಅಷ್ಟಾಗಿ ಬದಲಾಗಿಲ್ಲ. ಇದಕ್ಕಾಗಿಯೇ ಪುರಾಣಕಥೆಗಳು ಇಂದಿಗೂ ಪ್ರಸ್ತುತವಾಗುತ್ತವೆ. ಒಂದು ಕಥೆಯಲ್ಲಿ ಅಹಂಕಾರದಿಂದ ವ್ಯಕ್ತಿಯ ಪತನವನ್ನು ತೋರಿಸಿದರೆ, ಮತ್ತೊಂದು ಕಥೆಯಲ್ಲಿ ಸತ್ಯಕ್ಕಾಗಿ ಅನುಭವಿಸಿದ ಸಂಕಷ್ಟವನ್ನು ತೋರಿಸಲಾಗುತ್ತದೆ. ಇನ್ನೊಂದು ಕಥೆಯಲ್ಲಿ ಸಹೋದರತ್ವ, ತಾಯಿಯ ಪ್ರೀತಿ, ಗುರುಭಕ್ತಿ, ಸ್ನೇಹ, ದಾನ, ತ್ಯಾಗ ಅಥವಾ ಕರ್ತವ್ಯದ ಮಹತ್ವವನ್ನು ವಿವರಿಸಲಾಗುತ್ತದೆ. ಈ ಕಥೆಗಳನ್ನು ಕೇಳಿದ ಮಗು "ನಾನು ಹೇಗೆ ಬದುಕಬೇಕು?" ಎಂಬ ಪ್ರಶ್ನೆಗೆ ತನ್ನದೇ ರೀತಿಯಲ್ಲಿ ಉತ್ತರ ಹುಡುಕಲು ಪ್ರಾರಂಭಿಸುತ್ತದೆ. ಇದು ಪುರಾಣಗಳ ಶಿಕ್ಷಣಾತ್ಮಕ ಶಕ್ತಿ. ಇಲ್ಲಿ ಒಂದು ಪ್ರಮುಖ ವಿಚಾರವನ್ನು ಅರ್ಥಮಾಡಿಕೊಳ್ಳಬೇಕು. ಪುರಾಣಕಥೆಯಲ್ಲಿರುವ ಪ್ರತಿಯೊಂದು ಅದ್ಭುತ ಘಟನೆಯನ್ನು ವೈಜ್ಞಾನಿಕ ಸತ್ಯವೆಂದು ಸಾಬೀತುಪಡಿಸುವ ಅಗತ್ಯವಿಲ್ಲ. ಅದೇ ರೀತಿ ವೈಜ್ಞಾನಿಕವಾಗಿ ಸಾಬೀತಾಗಿಲ್ಲ ಎಂಬ ಕಾರಣಕ್ಕೆ ಅದರಲ್ಲಿರುವ ಪ್ರತಿಯೊಂದು ಮೌಲ್ಯವನ್ನೂ ಸುಳ್ಳು ಎಂದು ಘೋಷಿಸುವುದೂ ಸರಿಯಲ್ಲ. ಉದಾಹರಣೆಗೆ, ಒಂದು ಕಥೆಯಲ್ಲಿ ಅತಿಮಾನುಷ ಶಕ್ತಿ ಹೊಂದಿರುವ ಪಾತ್ರವಿರಬಹುದು. ಆ ಪಾತ್ರ ನಿಜವಾಗಿಯೂ ಅಂಥ ಶಕ್ತಿ ಹೊಂದಿತ್ತೇ ಎಂಬ ಪ್ರಶ್ನೆ ಬೇರೆ. ಆದರೆ ಆ ಪಾತ್ರದ ಮೂಲಕ ಧೈರ್ಯ, ನಿಷ್ಠೆ, ಸೇವೆ ಅಥವಾ ಆತ್ಮವಿಶ್ವಾಸವನ್ನು ಕಲಿಸುವ ಉದ್ದೇಶವಿದ್ದರೆ ಅದರ ಸಾಮಾಜಿಕ ಸಂದೇಶವನ್ನು ನಿರ್ಲಕ್ಷಿಸಲು ಸಾಧ್ಯವೇ?

ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿಯೂ ಕಥೆಗಳಿಗೆ ಮಹತ್ವವಿದೆ. ಮಕ್ಕಳಿಗೆ

**ಪುರಾಣಗಳಲ್ಲಿನ ಕಥೆಗಳು ಮನುಷ್ಯನ ಒಳಗಿನ ಒಳ್ಳೆಯ ಮತ್ತು ಕೆಟ್ಟ ಸಂಘರ್ಷವನ್ನು ಚಿತ್ರಿಸುತ್ತವೆ. ಸತ್ಯದ ಪರ ನಿಲ್ಲುವ, ಲೋಭದಿಂದ ಪತನಗೊಳ್ಳುವ, ಅಹಂಕಾರದಿಂದ ನಾಶವಾಗುವ, ತ್ಯಾಗದಿಂದ ಗೌರವ ಪಡೆಯುವ ಕರುಣೆಯಿಂದ ಮಹತ್ವ ಪಡೆಯುವ ವ್ಯಕ್ತಿಯ ಪಾತ್ರಗಳ ಮೂಲಕ ಮನುಷ್ಯನ ಗುಣ ದೋಷಗಳನ್ನು ಸಮಾಜದ ಮುಂದೆ ಇಡುತ್ತವೆ. ಇವು ಕೇವಲ ಹಳೆಯ ಕಾಲದ ಪಾತ್ರಗಳಲ್ಲ. ಇಂದಿನ ಮನುಷ್ಯನಲ್ಲಿಯೂ ಅದೇ ಅಹಂಕಾರವಿದೆ, ಅದೇ ಲೋಭವಿದೆ, ಅದೇ ಮೋಹವಿದೆ, ಅದೇ ಕೋಪವಿದೆ. ಬದಲಾದದ್ದು ಕಾಲ ಮತ್ತು ತಂತ್ರಜ್ಞಾನ; ಮನುಷ್ಯನ ಮನಸ್ಸಿನ ಮೂಲಭೂತ ಸಂಘರ್ಷಗಳು ಬದಲಾಗಿಲ್ಲ.**

ನೇರವಾಗಿ "ಪ್ರಾಮಾಣಿಕರಾಗಿರಿ", "ಸುಳ್ಳುಹೇಳಬೇಡಿ", "ಹಿರಿಯರನ್ನು ಗೌರವಿಸಿ", "ಇತರರಿಗೆ ಸಹಾಯ ಮಾಡಿ" ಎಂದು ನೂರು ಬಾರಿ ಹೇಳುವುದಕ್ಕಿಂತ ಒಂದು ಪರಿಣಾಮಕಾರಿ ಕಥೆ-ಯ ಮೂಲಕ ಅದನ್ನು ಮನಸ್ಸಿನಲ್ಲಿ ಬಿತ್ತುವುದು ಹೆಚ್ಚು ಪರಿಣಾಮಕಾರಿಯಾಗಬಹುದು. ಇದೇ ತಂತ್ರವನ್ನು ಹಿಂದಿನ ಸಮಾಜಗಳು ತಮ್ಮದೇ ರೀತಿಯಲ್ಲಿ ಬಳಸಿಕೊಂಡಿದ್ದವು. ನೀತಿಕಥೆಗಳು, ಜನಪದ ಕಥೆಗಳು, ಪುರಾಣಗಳು ಮತ್ತುಪುಣ್ಯಕಥೆಗಳುಮೌಲ್ಯಶಿಕ್ಷಣದ ಅನೌಪಚಾರಿಕಪಠ್ಯಪುಸ್ತಕಗಳಾಗಿದ್ದವು. ಆದರೆಕಾಲಬದಲಾಗಿದೆ. ಇಂದು ಕೆಲವು ಯುವಕರು ಪುರಾಣಗಳನ್ನು ಪ್ರಶ್ನಿಸುತ್ತಾರೆ. ಪ್ರಶ್ನಿಸುವುದು ತಪ್ಪಲ್ಲ. ಬದಲಾಗಿ ಪ್ರಶ್ನಿಸುವ ಮನೋಭಾವ ಇರಬೇಕು. ಆದರೆ ಪ್ರಶ್ನಿಸುವಾಗ ಅವಹೇಳನ ಮಾಡುವ ಅಗತ್ಯವಿಲ್ಲ. ಹಾಗೆಯೇ ನಂಬುವವರು ಕೂಡ ಪ್ರಶ್ನೆ ಕೇಳುವವರನ್ನು ಶತ್ರುಗಳಂತೆ ನೋಡುವ ಅಗತ್ಯವಿಲ್ಲ. ನಂಬಿಕೆ ಮತ್ತು ವಿಚಾರಶೀಲತೆ ಪರಸ್ಪರ ವಿರೋಧಿಗಳಾಗಬೇಕಿಲ್ಲ. ಪುರಾಣವನ್ನು ಓದಿದವನು ಅದರ ಆಧ್ಯಾತ್ಮಿಕ ಅರ್ಥವನ್ನು ಪಡೆಯಬಹುದು; ಇತಿಹಾಸಕಾರನು ಅದರ ಕಾಲಘಟ್ಟ ಮತ್ತು ಸಾಮಾಜಿಕ ಹಿನ್ನೆಲೆಯನ್ನು ಅಧ್ಯಯನ ಮಾಡಬಹುದು; ಸಾಹಿತ್ಯಾಸಕ್ತನು ಅದರ ರೂಪಕ ಮತ್ತು ಭಾಷಾ ಸೌಂದರ್ಯವನ್ನು ಕಾಣಬಹುದು; ಸಮಾಜಶಾಸ್ತ್ರಜ್ಞನು ಅದರಲ್ಲಿರುವ ಸಾಮಾಜಿಕ ರಚನೆಯನ್ನು ವಿಶ್ಲೇಷಿಸಬಹುದು. ಒಂದೇ ಕಥೆಗೆ ಇಷ್ಟೊಂದು ಆಯಾಮಗಳಿರುವಾಗ ಅದನ್ನು "ನಿಜ" ಅಥವಾ "ಸುಳ್ಳು" ಎಂಬ ಎರಡು ಪದಗಳಲ್ಲಿ ಮುಗಿಸುವುದು ಬಹಳ ಸೀಮಿತ ದೃಷ್ಟಿಕೋನವಾದೀತು. ಪುರಾಣಗಳ ಮತ್ತೊಂದು ದೊಡ್ಡ ಕೊಡುಗೆ ಎಂದರೆ ಅವು ಸಮಾಜವನ್ನು ಮೌಲ್ಯಗಳ ಸುತ್ತ ಒಗ್ಗೂಡಿಸುವ ಪ್ರಯತ್ನ ಮಾಡಿವೆ. ಹಬ್ಬಗಳು, ಆಚರಣೆಗಳು, ದೇವಾಲಯಗಳು, ವ್ರತಗಳು ಮತ್ತು ಕಥಾ ಪರಂಪರೆಗಳೊಂದಿಗೆ ಈ ಕಥೆಗಳು ಬೆಸೆದುಕೊಂಡಿವೆ. ಒಂದು ಕುಟುಂಬದಲ್ಲಿ ಅಜ್ಜ ಅಜ್ಜಿ ಮಕ್ಕಳಿಗೆ ಕಥೆ ಹೇಳುತ್ತಿದ್ದ ಕಾಲವನ್ನು ನೆನಪಿಸಿಕೊಂಡರೆ, ಅದು ಕೇವಲ ಮನರಂಜನೆಯ ಸಮಯವಾಗಿರಲಿಲ್ಲ. ಕುಟುಂಬದ ಅನುಭವ, ಜೀವನದ ಪಾಠ, ಸಂಸ್ಕೃತಿ ಮತ್ತು ಮೌಲ್ಯಗಳು ಕಥೆಯ ಮೂಲಕ ಮುಂದಿನ ಪೀಳಿಗೆಗೆ ವರ್ಗಾವಣೆಯಾಗುತ್ತಿದ್ದವು. ಇಂದು ಆ ಜಾಗವನ್ನು ಮೊಬೈಲ್ ಪರದೆ, ಸಾಮಾಜಿಕ ಮಾಧ್ಯಮದ ಚಿಕ್ಕ ವಿಡಿಯೋಗಳು ಮತ್ತು ಕ್ಷಣಿಕ ಮನರಂಜನೆ ಆಕ್ರಮಿಸಿಕೊಂಡಿವೆ.



ಪರಿಣಾಮವಾಗಿ ಕಥೆ ಕೇಳುವ ಸಂಸ್ಕೃತಿ ಕಡಿಮೆಯಾಗುತ್ತಿದೆ; ಅದರೊಂದಿಗೆ ಮೌಲ್ಯಗಳ ಅನೌಪಚಾರಿಕವರ್ಗಾವಣೆಯೂ ದುರ್ಬಲವಾಗುತ್ತಿದೆ. ಇದರಿಂದ ಪುರಾಣಗಳನ್ನು ಪ್ರಶ್ನಿಸಬಾರದು ಎಂಬ ಅರ್ಥ ಬರುವುದಿಲ್ಲ. ಬದಲಾಗಿ ಅವುಗಳನ್ನು ಇನ್ನಷ್ಟು ಆಳವಾಗಿ ಓದಬೇಕು. ಯಾವ ಕಾಲದಲ್ಲಿ ಈ ಕಥೆ ರೂಪುಗೊಂಡಿತು? ಅದರ ಸಾಮಾಜಿಕ ಹಿನ್ನೆಲೆ ಏನು? ಅದರಲ್ಲಿರುವ ರೂಪಕವೇನು? ಅದರ ನೈತಿಕ ಸಂದೇಶವೇನು? ಅದರಲ್ಲಿರುವ ಯಾವ ಅಂಶಗಳು ಇಂದಿನ ಕಾಲಕ್ಕೆ ಅನ್ವಯಿಸುತ್ತವೆ? ಯಾವುದನ್ನು ಐತಿಹಾಸಿಕ ಸತ್ಯವೆಂದು ಹೇಳಬಹುದು, ಯಾವುದನ್ನು ಧಾರ್ಮಿಕ ನಂಬಿಕೆಯಾಗಿ ನೋಡಬೇಕು, ಯಾವುದನ್ನು ಸಾಹಿತ್ಯಿಕ ರೂಪಕವಾಗಿ ಅರ್ಥೈಸಬೇಕು? ಇಂತಹ ಪ್ರಶ್ನೆಗಳೊಂದಿಗೆ ಅಧ್ಯಯನ ಮಾಡಿದಾಗ ಪುರಾಣಗಳ ಬಗ್ಗೆ ಆರೋಗ್ಯಕರವಾದ ವಿಚಾರಶೀಲತೆ ಬೆಳೆಯುತ್ತದೆ. ದುರದೃಷ್ಟವಶಾತ್ ಇಂದು ಎರಡು ಅತಿರೇಕಗಳು ಕಾಣಿಸುತ್ತವೆ. ಒಂದು ಕಡೆ ಪುರಾಣದಲ್ಲಿರುವ ಎಲ್ಲವನ್ನೂ ಅಕ್ಷರಶಃ ಸತ್ಯವೆಂದು ವಾದಿಸುವ ಮನೋಭಾವ; ಮತ್ತೊಂದು ಕಡೆ ಪುರಾಣದಲ್ಲಿರುವ ಎಲ್ಲವನ್ನೂ ಮೂಢನಂಬಿಕೆ ಮತ್ತು ಸುಳ್ಳು ಎಂದು ತಳ್ಳಿಹಾಕುವ ಮನೋಭಾವ. ಎರಡೂ ಅತಿರೇಕಗಳು ಸಂವಾದಕ್ಕೆ ಅಡ್ಡಿಯಾಗುತ್ತವೆ. ಸತ್ಯವನ್ನು ಹುಡುಕುವ ಮಾರ್ಗವು ಮಧ್ಯದಲ್ಲಿದೆ ಗೌರವದಿಂದ ಪ್ರಶ್ನಿಸುವುದು, ಸಾಕ್ಷ್ಯವನ್ನು ಪರಿಶೀಲಿಸುವುದು ಮತ್ತು ಮೌಲ್ಯವನ್ನು ಗುರುತಿಸುವುದು. ಇಂದಿನ ಸಮಾಜದಲ್ಲಿ ಭ್ರಷ್ಟಾಚಾರ, ಲೋಭ, ಹಿಂಸೆ, ಅಸೂಯೆ, ಕುಟುಂಬ ವಿಭಜನೆ, ವೃದ್ಧರ ನಿರ್ಲಕ್ಷ್ಯ, ಪರಿಸರ ನಾಶ, ವ್ಯಸನ, ಅತಿಯಾದ ಸ್ವಾರ್ಥ ಮತ್ತು ಸಾಮಾಜಿಕ ಹೊಣೆಗಾರಿಕೆಯ ಕೊರತೆ ಹೆಚ್ಚುತ್ತಿರುವ ಸಂದರ್ಭದಲ್ಲಿ ಪುರಾಣಗಳಲ್ಲಿರುವ ಮೌಲ್ಯಗಳನ್ನು ಹೊಸ ದೃಷ್ಟಿಯಿಂದ ಓದಬೇಕಾದ ಅಗತ್ಯವಿದೆ. ಸತ್ಯದ ಮಹತ್ವವನ್ನು ಹೇಳುವ ಕಥೆ ಇಂದಿಗೂ ಅಗತ್ಯ. ತ್ಯಾಗದ ಮಹತ್ವವನ್ನು ಹೇಳುವ ಕಥೆ ಇಂದಿಗೂ ಅಗತ್ಯ. ಕರುಣೆ ಮತ್ತು ಸಹಾನುಭೂತಿಯ ಪಾಠ ಇಂದಿಗೂ ಅಗತ್ಯ. ಪ್ರಕೃತಿಯನ್ನು ಗೌರವಿಸುವ ಸಂದೇಶ ಇಂದಿಗೂ ಅಗತ್ಯ. "ನನಗೆ ಏನು ಸಿಗುತ್ತದೆ?" ಎಂಬ ಪ್ರಶ್ನೆಯ ಬದಲು "ನಾನು ಸಮಾಜಕ್ಕೆ ಏನು ಕೊಡಬಲ್ಲೆ?" ಎಂಬ ಪ್ರಶ್ನೆಯನ್ನು ಹುಟ್ಟಿಸುವ ಕಥೆಗಳು ಇಂದಿನ ಪೀಳಿಗೆಗೂ ಬೇಕು. ಆದರೆ ಪುರಾಣಗಳ ಹೆಸರಿನಲ್ಲಿ ಯಾವುದೇ ಅನ್ಯಾಯವನ್ನು ಸಮರ್ಥಿಸುವುದು ಅಥವಾ ಪ್ರಶ್ನೆಗಳಿಗೆ ಬೀಗ ಹಾಕುವುದು ಸರಿಯಲ್ಲ. ಮಾನವೀಯತೆಗಿಂತ ದೊಡ್ಡದು ಯಾವುದೇ ಕಥೆಯಲ್ಲ. ನ್ಯಾಯ, ಸಮಾನತೆ, ಕರುಣೆ ಮತ್ತು ಸತ್ಯದಂತಹ ಮೌಲ್ಯಗಳ ವಿರುದ್ಧ ಯಾವುದೇ ವ್ಯಾಖ್ಯಾನ ಬಂದರೆ ಅದನ್ನು ವಿಚಾರಶೀಲವಾಗಿ ಪರಿಶೀಲಿಸಬೇಕು. ಪುರಾಣಗಳ ಉದ್ದೇಶ ಮನುಷ್ಯನನ್ನು ಉತ್ತಮಗೊಳಿಸುವುದಾದರೆ, ಅವುಗಳ ಅಧ್ಯಯನವೂ ಮನುಷ್ಯನನ್ನು ಉತ್ತಮಗೊಳಿಸುವ ದಿಕ್ಕಿನಲ್ಲಿರಬೇಕು.

ವಾಸ್ತವವಾಗಿ ಪುರಾಣಗಳ ಶಕ್ತಿ ಅವುಗಳ ಅದ್ಭುತಗಳಲ್ಲಿ ಮಾತ್ರ ಇಲ್ಲ; ಅವು ಮನುಷ್ಯನ ಮನಸ್ಸಿನೊಂದಿಗೆ ನಡೆಸುವ ಸಂಭಾಷಣೆಯಲ್ಲಿದೆ. ರಾಕ್ಷಸ ಎಂದರೆ ಹೊರಗಿನ ಯಾವುದೋ ಜೀವಿ ಮಾತ್ರವಲ್ಲ; ಮನುಷ್ಯನೊಳಗಿನ ಕ್ರೋಧ, ಲೋಭ, ಅಹಂಕಾರ ಮತ್ತು ದ್ವೇಷವೂ ಆಗಿರಬಹುದು. ದೇವತ್ವ ಎಂದರೆ ಕೇವಲ ಅತಿಮಾನುಷ ಶಕ್ತಿ ಅಲ್ಲ; ಸತ್ಯ, ಕರುಣೆ, ತ್ಯಾಗ, ಸೇವೆ ಮತ್ತು ಧರ್ಮಬದ್ಧತೆಯೂ ಆಗಬಹುದು. ಯುದ್ಧ ಎಂದರೆ ಕೇವಲ ಎರಡು ಸೇನೆಗಳ ನಡುವಿನ ಸಂಘರ್ಷವಲ್ಲ; ಮನುಷ್ಯನೊಳಗಿನ ಸತ್ಯ ಅಸತ್ಯದ ಹೋರಾಟವೂ ಆಗಬಹುದು. ಈ ರೀತಿಯಲ್ಲಿ ನೋಡಿದಾಗ ಪುರಾಣಗಳು ಇಂದಿನ ಮನುಷ್ಯನಿಗೂ ಹೊಸ ಅರ್ಥಗಳನ್ನು ನೀಡುತ್ತವೆ. ಹೀಗಾಗಿ ಪುರಾಣ ಪುಣ್ಯಕಥೆಗಳನ್ನು "ಸುಳ್ಳು" ಎಂದು ಒಂದೇ ಮಾತಿನಲ್ಲಿ ತಳ್ಳಿಹಾಕುವುದೂ ಬೇಡ; "ಇದರಲ್ಲಿರುವ ಪ್ರತಿಯೊಂದು ಘಟನೆ ಅಕ್ಷರಶಃ ನಡೆದಿದೆ" ಎಂದು ವಿಚಾರಕ್ಕೆ ಅವಕಾಶವಿಲ್ಲದ ನಂಬಿಕೆಯಲ್ಲಿ ಮುಳುಗುವುದೂ ಬೇಡ. ಅವುಗಳನ್ನು ಒಂದು ದೊಡ್ಡ ಸಾಂಸ್ಕೃತಿಕ ಪರಂಪರೆಯಾಗಿ, ಮಾನವೀಯ ಮೌಲ್ಯಗಳ ಕಥನವಾಗಿ, ರೂಪಕಗಳ ಭಂಡಾರವಾಗಿಮತ್ತುತಲೆಮಾರುಗಳಜೀವನಾನುಭವದದಾಖಲೆಯಾಗಿ ಓದಬೇಕು. ಸತ್ಯವನ್ನು ಹುಡುಕುವ ಬುದ್ಧಿ ಮತ್ತು ಮೌಲ್ಯವನ್ನು ಸ್ವೀಕರಿಸುವ ಹೃದಯ ಎರಡೂ ಒಂದಾಗಬೇಕು. ಕೊನೆಗೆ, ಒಂದು ಪುರಾಣಕಥೆಯ ಮಹತ್ವ ಅದು ಎಷ್ಟು ಅದ್ಭುತವಾಗಿದೆ ಎಂಬುದರಲ್ಲಿ ಅಲ್ಲ; ಅದನ್ನು ಕೇಳಿದ ನಂತರ ಒಬ್ಬ ಮನುಷ್ಯನ ಬದುಕಿನಲ್ಲಿ ಎಷ್ಟು ಒಳ್ಳೆಯ ಬದಲಾವಣೆ ಉಂಟಾಗುತ್ತದೆ ಎಂಬುದರಲ್ಲಿ ಇದೆ. ಒಂದು ಕಥೆ ಮಗುವಿಗೆ ತಾಯಿಯನ್ನು ಗೌರವಿಸುವುದನ್ನು ಕಲಿಸಿದರೆ, ಒಬ್ಬ ಯುವಕನಿಗೆ ಸತ್ಯದ ಪರ ನಿಲ್ಲುವ ಧೈರ್ಯ ನೀಡಿದರೆ, ಒಬ್ಬ ಅಧಿಕಾರಿಗೆ ಪ್ರಾಮಾಣಿಕತೆಯ ನೆನಪು ಮಾಡಿಸಿದರೆ, ಒಬ್ಬ ಶ್ರೀಮಂತನಿಗೆ ದಾನದ ಅರ್ಥ ತಿಳಿಸಿದರೆ, ಒಬ್ಬ ಸ್ವಾರ್ಥಿಗೆ ಸಮಾಜದ ಬಗ್ಗೆ ಯೋಚಿಸುವಂತೆ ಮಾಡಿದರೆ ಆ ಕಥೆಯ ಕೆಲಸ ಮುಗಿದಿಲ್ಲ; ಅದು ಇನ್ನೂ ಜೀವಂತವಾಗಿದೆ. ಆದ್ದರಿಂದ ಪುರಾಣ ಪುಣ್ಯಕಥೆಗಳನ್ನು ಕೇವಲ ಹಳೆಯ ಕಾಲದ ಅವಶೇಷಗಳೆಂದು ನೋಡುವ ಅಗತ್ಯವಿಲ್ಲ. ಅವುಗಳನ್ನು ಹೊಸ ಪೀಳಿಗೆಗೆ ಹೊಸ ಭಾಷೆಯಲ್ಲಿ ಪರಿಚಯಿಸುವ ಅಗತ್ಯವಿದೆ. ವಿಜ್ಞಾನವನ್ನು ಗೌರವಿಸುತ್ತಾ, ವಿಚಾರಶೀಲತೆಯನ್ನು ಬೆಳೆಸುತ್ತಾ, ಆದರೆ ಸಂಸ್ಕೃತಿಯ ಮೌಲ್ಯಗಳನ್ನು ಕಳೆದುಕೊಳ್ಳದೆ ಅವುಗಳ ಒಳಾರ್ಥವನ್ನು ಅರ್ಥಮಾಡಿಕೊಳ್ಳಬೇಕು. ಕಥೆಯ ಹೊರಮೈಯಲ್ಲಿ ಅದ್ಭುತವಿರಬಹುದು; ಅದರ ಅಂತರಾಳದಲ್ಲಿ ಮನುಷ್ಯನ ಬದುಕಿನ ಸತ್ಯವಿರಬಹುದು. ಅದನ್ನು ಹುಡುಕುವ ದೃಷ್ಟಿ ನಮ್ಮದಾಗಬೇಕು. ಏಕೆಂದರೆ ಪುರಾಣಗಳ ಅಂತಿಮ ಉದ್ದೇಶ ಕೇವಲ ದೇವರ ಮಹಿಮೆಯನ್ನುಹೇಳುವುದಲ್ಲ ಮನುಷ್ಯನೊಳಗಿನ ಮನುಷ್ಯನನ್ನುಎಚ್ಚರಿಸುವುದೇ ಆಗಿರಬಹುದು.



ಅನಂತ ಪಪ್ಪು,
ಬೆಳಗಾವಿ
ಮೋ:9448527870

## ಪರಿಹಾರ ನೀಡದ ಸರ್ಕಾರಕ್ಕೆ ಕೋರ್ಟ್ ಚಾಟಿ; ಗದಗ ಡಿಸಿ, ಎಡಿಸಿ ಕಾರು ಹಾಗೂ ಕಚೇರಿ ಪರಿಕರಗಳ ಜಪ್ತಿಗೆ ಆದೇಶ

**ಗದಗ:** ಶಿಂಗಟಾಲೂರು ಏತ ನೀರಾವರಿ ಯೋಜನೆಗಾಗಿ ತಮ್ಮ ಭೂಮಿಯನ್ನು ಕಳೆದುಕೊಂಡು, ನ್ಯಾಯಯುತ ಪರಿಹಾರಕ್ಕಾಗಿ ವರ್ಷಗಳಿಂದ ಕಾನೂನು ಹೋರಾಟ ನಡೆಸುತ್ತಿರುವ ರೈತರಿಗೆ ಜಿಲ್ಲಾಡಳಿತ ಹಾಗೂ ಸರ್ಕಾರದ ನಿರ್ಲಕ್ಷ್ಯದಿಂದ ಮತ್ತೊಮ್ಮೆ ನಿರಾಶೆಯಾಗಿದೆ. ನ್ಯಾಯಾಲಯದ ಸ್ಪಷ್ಟ ಆದೇಶವಿದ್ದರೂ ರೈತರಿಗೆ ನೀಡಬೇಕಾದ ಪರಿಹಾರದ ಮೊತ್ತವನ್ನು ಪಾವತಿಸದ ಹಿನ್ನೆಲೆಯಲ್ಲಿ, ಗದಗ ಜಿಲ್ಲಾಧಿಕಾರಿ ಮತ್ತು ಅಪರ ಜಿಲ್ಲಾಧಿಕಾರಿ (ADC) ಅವರ ಅಧಿಕೃತ ಕಾರುಗಳು ಸೇರಿದಂತೆ ಕಚೇರಿಯ ಪ್ರಮುಖ ಪರಿಕರಗಳನ್ನು ಜಪ್ತಿ ಮಾಡುವಂತೆ ನ್ಯಾಯಾಲಯ ಕಟ್ಟುನಿಟ್ಟಿನ ಆದೇಶ ಹೊರಡಿಸಿದೆ. ಮುಂಡರಗಿ ತಾಲೂಕಿನ ಮೇವುಂಡಿ ಮತ್ತು ಬರದೂರು ಗ್ರಾಮದ 17 ರೈತರಿಗೆ ಸೇರಬೇಕಿದ್ದ ಲಕ್ಷಾಂತರ ರೂಪಾಯಿ ಹೆಚ್ಚುವರಿ ಪರಿಹಾರದ ಹಣ ಇನ್ನೂ ಪಾವತಿಯಾಗದೆ ಬಾಕಿ ಉಳಿದಿದೆ.

2017ರಿಂದಲೂ ರೈತರು ಹೆಚ್ಚುವರಿ ಪರಿಹಾರಕ್ಕಾಗಿ ನ್ಯಾಯಾಲಯದಲ್ಲಿ ಹೋರಾಟ ನಡೆಸುತ್ತಿದ್ದು, 2024ರಲ್ಲಿ ಎಕರೆಗೆ 30 ಲಕ್ಷ ಪರಿಹಾರ ನೀಡುವಂತೆ ಕೋರ್ಟ್ ಆದೇಶಿಸಿತ್ತು. ಆದರೆ, ಆದೇಶವಾಗಿ ಎರಡು ವರ್ಷ ಕಳೆದರೂ ಪರಿಹಾರ ವಿತರಿಸಿಲ್ಲ ಎಂದು ರೈತರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ನ್ಯಾಯಾಲಯದ ಆದೇಶದ ಮೇರೆಗೆ ಕಠಿಣ ಕ್ರಮ ಕೈಗೊಂಡಿದ್ದು, ಜಿಲ್ಲಾಡಳಿತದ ಕಾರುಗಳಷ್ಟೇ ಅಲ್ಲದೆ ಜಿಲ್ಲಾಧಿಕಾರಿ ಕಚೇರಿಯ 8 ಲ್ಯಾಪ್‌ಟಾಪ್‌ಗಳು, 3 ಸಿಪಿಯು ಹಾಗೂ 1 ಪ್ರಿಂಟರ್ ಅನ್ನು ಕೋರ್ಟ್ ವಶಕ್ಕೆ ಪಡೆದುಕೊಂಡಿದೆ. ಕೇವಲ 2 ತಿಂಗಳ ಅಂತರದಲ್ಲಿ ಜಿಲ್ಲಾಧಿಕಾರಿಗಳ ಕಾರು ಸೀಜ್ ಮಾಡಲು ಮುಂದಾಗಿರುವುದು ಇದು ಎರಡನೇ ಬಾರಿಯಾಗಿದೆ. ಈಗಾಗಲೇ ಕಳೆದ ಆಗಸ್ಟ್ 14ರಂದೂ ಸಹ ಡಿಸಿ ಕಾರು ಜಪ್ತಿಗೆ ರೈತರು ಆದೇಶ ತಂದಿದ್ದರು. ಆ ಸಂದರ್ಭದಲ್ಲಿ ಜಿಲ್ಲಾಡಳಿತವು ಸ್ವಲ್ಪ ಕಾಲಾವಕಾಶ ಕೋರಿದ್ದರಿಂದ ಕಾರು ವಾಪಸ್ ಪಡೆಯಲಾಗಿತ್ತು. ಆದರೆ, ಈಗಲೂ ಭರವಸೆ ಈಡೇರದ ಕಾರಣ ಮತ್ತೊಮ್ಮೆ ಕೋರ್ಟ್ ಆದೇಶ ಜಾರಿಯಾಗಿದೆ.

ಯೋಜನೆ ಆರಂಭದಲ್ಲಿ ಭೂಮಿ ನೀಡಿದ ರೈತರಿಗೆ ಸರ್ಕಾರ ಕೇವಲ ಎಕರೆಗೆ 50,000 ಪರಿಹಾರ ಘೋಷಿಸಿತ್ತು. ಈ ಅತ್ಯಲ್ಪ ಪರಿಹಾರವನ್ನು ವಿರೋಧಿಸಿ ರೈತರು ನ್ಯಾಯಾಲಯದ ಮೊರೆ ಹೋಗಿದ್ದರು.




ನ್ಯಾಯಾಲಯದ ಆದೇಶವನ್ನೂ ಲೆಕ್ಕಿಸದೆ ನಿರಂತರ ನಿರ್ಲಕ್ಷ್ಯ ತೋರುತ್ತಿರುವ ನೀರಾವರಿ ನಿಗಮ ಹಾಗೂ ಜಿಲ್ಲಾಡಳಿತದ ಧೋರಣೆ-ಯ ವಿರುದ್ಧ ರೈತರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದು, ಕೂಡಲೇ ಬಾಕಿ ಪರಿಹಾರವನ್ನು ಬಿಡುಗಡೆ ಮಾಡುವಂತೆ ಆಗ್ರಹಿಸಿದ್ದಾರೆ.

## ಕೊಳಚೆ ನರಕವಾದ ಧಾರವಾಡದವರ ಪ್ಲಾಟ್

**ನವಲಗುಂದ:** ಪುರಸಭೆ ಅಧಿಕಾರಿಗಳ ಬೇಜವಾಬ್ದಾರಿತನ ಮತ್ತು ಮಂಡುತನದ ಧೋರಣೆಗೆ ಪಟ್ಟಣದ ಧಾರವಾಡದವರ ಪ್ಲಾಟ್ ನಿವಾಸಿಗಳು ನರಕಯಾತನೆ ಅನುಭವಿಸುತ್ತಿದ್ದಾರೆ.

ಕಳೆದ ಹಲವು ತಿಂಗಳುಗಳಿಂದ ಈ ಭಾಗದಲ್ಲಿ ಯಾವುದೇ ಮೂಲಭೂತಸೌಕರ್ಯಗಳಿಲ್ಲದೆಸಾರ್ವಜನಿಕರುಪರದಾಡುತ್ತಿದ್ದು, ಇಡೀ ಲೇಔಟ್ ಸದ್ಯ 'ಕೊಳಚೆ ಪ್ರದೇಶ'ವಾಗಿ ಮಾರ್ಪಟ್ಟಿದೆ.

ಬಡಾವಣೆಯ ಗಟಾರುಗಳು ಹೂಳು ಮತ್ತು ಕಸದಿಂದ ಸಂಪೂರ್ಣವಾಗಿ ಬಂದ್ ಆಗಿದ್ದು ಇದರಿಂದಾಗಿ ಗಟಾರಿನಲ್ಲಿ ಹರಿಯಬೇಕಾದ ಮಲಮೂತ್ರ ಮಿಶ್ರಿತ ಕೊಳಚೆ ನೀರು ನೇರವಾಗಿ ರಸ್ತೆಗಳ ಮೇಲೆ ಹರಿಯುತ್ತಿದೆ. ಇಡೀ ರಸ್ತೆ ಕೆಸರು ಗದ್ದೆಯಂತಾಗಿದ್ದು, ಹಿರಿಯ ನಾಗರಿಕರು, ಮಹಿಳೆಯರು ಮತ್ತು ಶಾಲಾ ಮಕ್ಕಳು ಮೂಗು ಮುಚ್ಚಿಕೊಂಡು, ಪ್ರಾಣ ಕೈಯಲ್ಲಿ ಹಿಡಿದು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ಹಲವು ತಿಂಗಳುಗಳಿಂದ ಕೊಳಚೆ ನೀರು ರಸ್ತೆಯಲ್ಲೇ ನಿಂತಿರುವುದರಿಂದ ಇಡೀ ಬಡಾವಣೆಯಲ್ಲಿ ಸಹಿಸಲಾಗದ ದುರ್ವಾಸನೆ ಹರಡಿದೆ. ಸೊಳ್ಳೆಗಳ ಕಾಟ ವಿಪರೀತವಾಗಿದ್ದು, ಡೆಂಗ್ಯೂ, ಮಲೇರಿಯಾದಂತಹ ಮಾರಕ ರೋಗಗಳ ಭೀತಿ ಎದುರಾಗಿದೆ, ಈಗಾಗಲೇ ಬಡಾವಣೆಯ ಹಲವು ಮಕ್ಕಳು ಜ್ವರದಂತಹ ಕಾಯಿಲೆಗಳಿಂದ ಬಳಲುತ್ತಿದ್ದಾರೆ ಎಂದು ಸ್ಥಳೀಯರು ಅಳಲು ತೋಡಿಕೊಂಡಿದ್ದಾರೆ.

ಮೂಲಭೂತ ಸೌಕರ್ಯ ಒದಗಿಸಬೇಕಾದ ಪುರಸಭೆ ಮಾತ್ರ ಕಣ್ಣಿದ್ದು ಕುರುಡನಂತೆ ವರ್ತಿಸುತ್ತಿದೆ. ಹಲವು ಬಾರಿ ಅಧಿಕಾರಿಗಳಿಗೆ ಮನವಿ ಮಾಡಿದರೂ ಕೇವಲ 'ಖಾಲಿ ಭರವಸೆ' ನೀಡುತ್ತಿದ್ದಾರೆಯೇ ವಿನಃ ಯಾವುದೇ ಕ್ರಮ ಕೈಗೊಂಡಿಲ್ಲ. "ನಾವು ನಿಯಮಿತವಾಗಿ ತೆರಿಗೆ ಕಟ್ಟುತ್ತಿರುವುದು ಇಂತಹ ನರಕದಲ್ಲಿ ಬದುಕಲಿಕ್ಕಾ?" ಎಂದು ನಿವಾಸಿಗಳು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಇನ್ನಾದರೂ ಪುರಸಭೆಯ ಮುಖ್ಯಾಧಿಕಾರಿಗಳು ತಕ್ಷಣ ಸ್ಥಳಕ್ಕೆ ಭೇಟಿ ನೀಡಿ, ಗಟಾರುಗಳನ್ನು ಸ್ವಚ್ಛಗೊಳಿಸಿ ರಸ್ತೆ ದುರಸ್ತಿ ಮಾಡಿಕೊಡಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಪುರಸಭೆ ಕಚೇರಿಗೆ ಮುತ್ತಿಗೆ ಹಾಕಿ ಉಗ್ರ ಪ್ರತಿಭಟನೆ ನಡೆಸಲಾಗುವುದು ಎಂದು ಧಾರವಾಡದವರ ಪ್ಲಾಟ್ ನಿವಾಸಿಗಳು ಎಚ್ಚರಿಕೆ ನೀಡಿದ್ದಾರೆ.



**"ಧಾರವಾಡದವರ ಪ್ಲಾಟ್‌ನಲ್ಲಿರುವ ಎಲ್ಲಾ ಗಟಾರುಗಳು ಕಸ, ಮಣ್ಣು ತುಂಬಿ ಬ್ಲಾಕ್ ಆಗಿವೆ. ಕೆಲವು ಕಡೆ ಗಟಾರುಗಳು ಸಂಪೂರ್ಣ ಧ್ವಂಸಗೊಂಡಿವೆ. ಗಟಾರಿನಲ್ಲೇ ದಟ್ಟವಾಗಿ ಹುಲ್ಲು ಬೆಳೆದಿದ್ದು, ಮಳೆ ನೀರು ಹೋಗಲು ದಾರಿಯೇ ಇಲ್ಲದಂತಾಗಿದೆ. ಇನ್ನಾದರೂ ಪುರಸಭೆ ಅಧಿಕಾರಿಗಳು ಎಚ್ಚೆತ್ತುಕೊಂಡು ಇತ್ತ ಗಮನ ಹರಿಸಬೇಕು."**

**। ಇಬ್ರಾಹಿಂ ಮೇಸ್ತ್ರಿ, (ಸ್ಥಳೀಯ ನಿವಾಸಿ, ಧಾರವಾಡದವರ ಪ್ಲಾಟ್)**

**"ಬಡಾವಣೆಯಲ್ಲಿ ರಾತ್ರಿಯಾದರೆ ಸಾಕು ಸೊಳ್ಳೆಗಳ ಹಾವಳಿ ಮಿತಿಮೀರಿದೆ. ಮನೆಯಲ್ಲಿ ಮಕ್ಕಳು, ವೃದ್ಧರು ನೆಮ್ಮದಿಯಾಗಿ ನಿದ್ದೆ ಮಾಡಲು ಸಾಧ್ಯವಾಗುತ್ತಿಲ್ಲ. ಡೆಂಗ್ಯೂ, ಮಲೇರಿಯಾ ರೋಗದ ಭೀತಿ ಆವರಿಸಿದೆ. ತಕ್ಷಣ ಗಟಾರು ಸ್ವಚ್ಛಗೊಳಿಸಿ, ಸೊಳ್ಳೆ ನಾಶಕ ಔಷಧಿ ಸಿಂಪಡಿಸಬೇಕು. ಇಲ್ಲದಿದ್ದರೆ ಕರ್ತವ್ಯಲೋಪದಡಿ ಪುರಸಭೆ ಅಧಿಕಾರಿಗಳ ವಿರುದ್ಧ ಕಾನೂನು ಹೋರಾಟ ನಡೆಸಲಾಗುವುದು."**

**। ಮಾಬುಸಾಬ ಯರಗುಪ್ಪಿ, ಸಮಾಜ ಸೇವಕರು, ನವಲಗುಂದ**

**"ಇಲ್ಲಿನ ರಸ್ತೆಗಳ ಪರಿಸ್ಥಿತಿ ಹೇಳತೀರದು. ಸ್ವಲ್ಪ ಮಳೆ ಬಂದರೂ ಇಡೀ ರಸ್ತೆ ಕೆಸರುಮಯವಾಗಿ ಓಡಾಡಲು ಆಗದಂತಾಗುತ್ತದೆ. ಶಾಲಾ ಮಕ್ಕಳು, ಮಹಿಳೆಯರು ನಿತ್ಯ ಜಾರಿ ಬೀಳುತ್ತಿದ್ದಾರೆ. ಸಂಬಂಧಪಟ್ಟ ಮುಖ್ಯಾಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ತಕ್ಷಣ ಸ್ಥಳ ಪರಿಶೀಲನೆ ನಡೆಸಿ, ರಸ್ತೆ ಸುಧಾರಣೆಗೆ ಅಗತ್ಯ ಕ್ರಮ ಜರುಗಿಸಬೇಕು."**

**। ಮಲ್ಲಿಕಾರ್ಜುನಸ್ವಾಮಿ ಮಠಪತಿ, ರೈತ ಮುಖಂಡರು, ನವಲಗುಂದ**

SAMALOCHANE RANEBENNURSUDDI KANNADA DAILY MORNING, OWNER, PUBLISHER BY: RAJESHWARI S OLEKAR, PUBLISHED FROM: H.NO, 58 MAIN ROAD, YAKALASAPUR, SUB DISTRICT RANEBENNUR, HAVERI, KARNATAKA-581115, PRINTED AT: VEDAMURTHY S T, GAYATHRI PUBLICATIONS, H.NO, 720, NEKAR COLONY, INDUSTRIAL AREA, HAVERI, KARNATAKA- 581115, EDITOR BY: RAJESHWARI S OLEKAR